ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಆಗಸ್ಟ್ 2021 ಮಾಸ ಪತ್ರಿಕೆ

ಸಂಪುಟ/Volume : 43
ಸಂಚಿಕೆ/Issue : 11
ಪುಟ/Pages : 12
ಬೆಲೆ/Price : ₹ 10/–

**Akhila Karnataka Shikshaka Samachar | August 2021 | Monthly**




**A Journal of Karnataka Rajya Madhyamika Shikshaka Sangha (R.)**

## 75ನೇ ಅಮೃತೋತ್ಸವ ಸ್ವಾತಂತ್ರ್ಯೋತ್ಸವದ ಆಚರಣೆಯ ಸಾರ್ಥಕತೆ

ಯಾರಿಗೆ ಬಂತು? ಎಲ್ಲಿಗೆ ಬಂತು ? 47 ರ ಸ್ವಾತಂತ್ರ್ಯ ? ಈ ಪ್ರಶ್ನೆಯನ್ನು ಓದಿದ ತಕ್ಷಣ ಬರುವ ಮತ್ತೊಂದು ಪ್ರಶ್ನೆಯೆಂದರೆ ಅಷ್ಟು ಗೊತ್ತಿಲ್ಲವೇ? ಎಂದು. ಇರಲಿ, ಭಾರತೀಯರಾದ ನಮಗೆಲ್ಲರಿಗೂ ಈ ಪ್ರಶ್ನೆಗೆ ಉತ್ತರ ತಿಳಿದಿದೆ. ಆದರೂ ಒಮ್ಮೆ-ಮತ್ತೊಮ್ಮೆ ಈ ಪ್ರಶ್ನೆಯನ್ನು ನಮ್ಮ ಒಳಮನಸ್ಸಿಗೆ ನಾವು ಹಾಕಿಕೊಂಡಾಗ ಉತ್ತರಕ್ಕೆ ತಡಕಾಡಲು ಪ್ರಾರಂಭಿಸುತ್ತೇವೆ ಅಲ್ಲವೇ? ಭಾರತದ ಇತಿಹಾಸವನ್ನು ಓದಿದಾಗ ನಮಗೆ ತಿಳಿಯುವುದು ಏನೆಂದರೆ ಸಂಪದ್ಭರಿತವಾದ ಭಾರತಕ್ಕೆ ಬರಲು ಮಾರ್ಗವನ್ನು ಕಂಡುಹಿಡಿಯಲಿಕ್ಕಾಗಿಯೇ ಅನೇಕ ದೇಶದವರು ಎಷ್ಟು ಪ್ರಯತ್ನ ಪಟ್ಟರು, ಎಷ್ಟು ಸಂಶೋಧನೆಗಳನ್ನು ಅಂದಿನ ಕಾಲದಲ್ಲಿಯೇ ಮಾಡಿದರು ಎಂಬುದು ಮತ್ತು ಅವರನ್ನೆಲ್ಲಾ ಭಾರತ ಎಷ್ಟು ಆಕರ್ಷಿಸಿತ್ತು ಎಂದು. ನಮ್ಮ ದೇಶ ಅಂದೇ ಅಲ್ಲ, ಇಂದಿಗೂ ವಿದೇಶಿಯರನ್ನೆಲ್ಲಾ ಅಯಸ್ಕಾಂತದಂತೆ ಆಕರ್ಷಿಸುತ್ತಿದೆ ಎಂದರೆ ತಪ್ಪಾಗಲಾರದು. ಸುಸಂಸ್ಕೃತ, ಸಂಪದ್ಭರಿತ ರಾಷ್ಟ್ರ ವಿದೇಶೀಯರನ್ನು ಆಕರ್ಷಿಸಿದ್ದಷ್ಟೇ ಅಲ್ಲ, ಅವರು ಇಲ್ಲಿಯೇ ಇರಲು ಇಚ್ಛಿಸುವಂತೆ ಮಾಡಿತು. ವಿದೇಶೀಯರು ವ್ಯಾಪಾರವನ್ನಷ್ಟೇ ಮಾಡದೇ, ಇಲ್ಲಿಯೇ ತಳವೂರಲು ಆಸೆಪಟ್ಟರೆ, ನಮ್ಮ ಭಾರತದಲ್ಲಿಯೇ ಜನ್ಮ ತಳೆದು, ಭಾರತ ಮಾತೆಗೆ ದ್ರೋಹ ಬಗೆಯುವ ಕೆಲವೇ ಕೆಲವು ದ್ರೋಹಿಗಳಿಂದ ಭಾರತಮಾತೆ ಬೇರೊಬ್ಬರ ಪಾಲಾಗಿದ್ದು ವಿಷಾದನೀಯ. ಅನೇಕ ವರ್ಷಗಳ ಗುಲಾಮಗಿರಿಯ ನಂತರ ದೇಶಭಕ್ತಿಯನ್ನೇ ತಮ್ಮ ತನುಮನದಲ್ಲಿ ತುಂಬಿಕೊಂಡ ಅನೇಕ ದೇಶಭಕ್ತರ ಬಲಿದಾನ, ಹೋರಾಟಗಳಿಂದ ಭಾರತಮಾತೆಗೆ ಹಾಕಿದ್ದ ಸಂಕೋಲೆಯನ್ನು ಬಿಡಿಸಿದ್ದು ಇತಿಹಾಸ. ನಾವು-ನೀವೆಲ್ಲಾ ಬಹಳ ಸಂಭ್ರಮದಿಂದ 75 ನೇ ಅಮೃತಮಹೋತ್ಸವದ ಸ್ವಾತಂತ್ರ್ಯ ದಿನಾಚರಣೆಯನ್ನು ಅತ್ಯಂತ ಉತ್ಸಾಹದಿಂದ, ಗರ್ವದಿಂದ ಕೊರೋನಾ ಮಹಾಮಾರಿಯ ಹೊಡೆತದ ಹೊರತಾಗಿಯೂ ಅನೇಕ ನಿಬಂಧನೆಗಳ ಮಧ್ಯ, ಎಚ್ಚರಿಕೆಯ ಮಾರ್ಗಸೂಚಿಗಳನ್ನು ಪಾಲಿಸುತ್ತಾ ಆಚರಿಸಿದ್ದೇವೆ. ನಾನೇಕೆ ಭಾರತದ ಇತಿಹಾಸವನ್ನು ಇಲ್ಲಿಡುತ್ತಿದ್ದೇನೆ ಎಂದರೆ ಪ್ರಸ್ತುತ ಸನ್ನಿವೇಶದಲ್ಲಿ ನಾವೆಲ್ಲಾ ಅಫಘಾನಿಸ್ತಾನದಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ನೋಡುತ್ತಿದ್ದೇವೆ, ಕೇಳುತ್ತಿದ್ದೇವೆ. ಅಫಘಾನಿಸ್ತಾನಿಯರ ಪರಿಸ್ಥಿತಿಯನ್ನು ನೋಡಿ ಮರಗುತ್ತಿದ್ದೇವೆ. ಉಗ್ರರ ಅಟ್ಟಹಾಸವನ್ನು, ಅಮಾಯಕರ ಮೇಲೆ ನಡೆಸುತ್ತಿರುವ ದೌರ್ಜನ್ಯವನ್ನು, ಅನ್ಯಾಯದ ಮತಾಂಧತೆಯ ಕಾರ್ಯಾಚರಣೆಯ ವಿವರಗಳನ್ನು, ಅಧಿಕಾರ ಲಾಲಸೆಯ ದುಷ್ಪರಿಣಾಮಗಳನ್ನು ತಿಳಿಯುತ್ತಿದ್ದೇವೆ. ಅಂತಹ ಅಲ್ಲದಿದ್ದರೂ ಅನೇಕ ಕಹಿ ಘಟನೆಗಳು ಅಂದು ನಮ್ಮ ಭಾರತೀಯರನ್ನು ಬ್ರಿಟಿಷರ ವಿರುದ್ಧ ಹೋರಾಡಲು ಸನ್ನದ್ಧಗೊಳಿಸಿದ್ದವು ಎಂದರೆ ತಪ್ಪಾಗಲಾರದು. ಅಷ್ಟೆಲ್ಲಾ ನೋವು, ಬಲಿದಾನ, ತ್ಯಾಗಗಳ ನಂತರ ಪಡೆದ ಸ್ವಾತಂತ್ರ್ಯವನ್ನು ಒಂದು ಆಚರಣೆಯಾಗಿ ಸಂಭ್ರಮಿಸಿ ಬಿಡುವುದಷ್ಟೇ ಅಲ್ಲ. ಆ ತ್ಯಾಗ, ಬಲಿದಾನಗಳಿಗೆ ಬೆಲೆ ಬರಬೇಕಾದರೆ ನಾವೆಲ್ಲಾ ಭಾರತಮಾತೆಯನ್ನು ಹೇಗೆ ನೋಡಿಕೊಳ್ಳಬೇಕು? ಎಂಬುದನ್ನು ಪ್ರತಿಯೊಬ್ಬ ಭಾರತೀಯನು ಯೋಚಿಸಲೇಬೇಕು, ಅದರಲ್ಲೂ ಶಿಕ್ಷಕರಾದ ನಾವು ಪಠ್ಯಪುಸ್ತಕದಲ್ಲಿ ಇರುವುದನ್ನು (ಪರೀಕ್ಷೆಗೆ ಅನುಕೂಲವಾಗುವಂತೆ) ಹೇಳುತ್ತಾ, ಭಾರತದ ನಿಜವಾದ ಇತಿಹಾಸವನ್ನು ವಿದ್ಯಾರ್ಥಿಗಳಿಗೆ ಹೇಳಿ ದೇಶಭಕ್ತಿಯನ್ನು ಬೆಳೆಸಬೇಕಾದುದು ನಮ್ಮ ಕರ್ತವ್ಯ. ಇಂದು ನಮ್ಮ ಮಧ್ಯದಲ್ಲಿಯೇ ಉಗ್ರರನ್ನು ನಮ್ಮ ಸ್ವಾತಂತ್ರ್ಯ ಹೋರಾಟಗಾರರಿಗೆ ಹೋಲಿಸುವ ಭಾರತಮಾತೆಯ ಪುತ್ರರೆಂದು ಸೋಗು ಹಾಕುತ್ತಿರುವ ದ್ರೋಹಿಗಳನ್ನು ನಾವೆಲ್ಲಾ ನೋಡುತ್ತಿದ್ದೇವೆ. ಶಿಕ್ಷಕರಾದ ನಾವು ನಿಜವಾದ ದೇಶಭಕ್ತರನ್ನು ಬೆಳೆಸುವ ಗುರುತರವಾದ ಜವಾಬ್ದಾರಿಯನ್ನು ಹೊರಬೇಕಾದುದು ಇಂದಿನ ಪರಿಸ್ಥಿತಿಯಲ್ಲಿ ಅನಿವಾರ್ಯ.

ಸ್ವಾತಂತ್ರ್ಯ ಎಂಬುದು ಸ್ವೇಚ್ಛೆಯಲ್ಲ. ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತವನ್ನು ಪಕ್ಷಾತೀತ ರಾಷ್ಟ್ರವನ್ನಾಗಿ ಮಾಡಿ, ವಿಶ್ವಮಾತೆಯೆಂಬ ಗೌರವವನ್ನು ನೀಡಬೇಕಾದುದು ನಮ್ಮೆಲ್ಲರ ಕರ್ತವ್ಯವಾಗಬೇಕು. ಆಗ ಮಾತ್ರ ಸ್ವಾತಂತ್ರ್ಯ ದಿನಾಚರಣೆಗೆ ಒಂದು ಅರ್ಥ ಬಂದಂತಾಗುತ್ತದೆ.

## ವಿನಮ್ರಪೂರ್ವಕ ಶ್ರದ್ಧಾಂಜಲಿ

ಜಿ.ಎಸ್.ಕೆ ಎಂದೇ ನಮಗೆಲ್ಲಾ ಪರಿಚಿತರಾದ ಜಿ. ಎಸ್ ಕೃಷ್ಣಮೂರ್ತಿ ಸರ್ ದಿನಾಂಕ 21.08.21 ರ ಶನಿವಾರದಂದು ಬೆಂಗಳೂರಿನಲ್ಲಿ ವಿಧಿವಶರಾದರು. ಬ್ರಹ್ಮಚಾರಿಯಾಗಿದ್ದ ಅವರು ಕಳೆದ ನಾಲ್ಕು ದಶಕಗಳಿಂದ ಸಂಘದ ಕಾರ್ಯಾಲಯದಲ್ಲೇ ಕಛೇರಿಯ ಎಲ್ಲಾ ಕೆಲಸಗಳನ್ನು ನಿರ್ವಹಿಸುತ್ತಾ, ಶಿಕ್ಷಕ ಸಂಘದ ಎಲ್ಲಾ ಕಾರ್ಯಕರ್ತರಿಗೂ ಹಿರಿಯಣ್ಣನಂತೆ, ಸಮಸ್ಯೆಗಳನ್ನು ಹೊತ್ತು ಬರುತ್ತಿದ್ದ ಶಿಕ್ಷಕರ ಸಮಸ್ಯೆಗಳನ್ನು ಶಾಂತವಾಗಿ ಆಲಿಸಿ, ಸೂಕ್ತವಾದ ಮಾರ್ಗದರ್ಶನ ಮಾಡುತ್ತಿದ್ದರು.

ಜೀವನಪೂರ್ತಿ ಕಾಯಕಯೋಗಿಯಂತೆ ಶಿಕ್ಷಕಸಂಘದ ವಿವಿಧ ಜವಾಬ್ದಾರಿಯನ್ನು ನಗುನಗುತ್ತಾ ನಿರ್ವಹಿಸಿದ್ದಲ್ಲದೇ, ಶಿಕ್ಷಕ ಸಂಘದ ಮುಖಪುಟವಾದ ಶಿಕ್ಷಕ ಸಮಾಚಾರದ ಸಂಪಾದಕರಾಗಿಯೂ ಸಹ ಅನೇಕ ವರ್ಷಗಳ ಕಾಲ ಕಾರ್ಯ ನಿರ್ವಹಿಸಿದ್ದರು. ಇಂದಿಗೂ ಸಹ ಶಿಕ್ಷಕ ಸಮಾಚಾರದ ಸಂಪಾದಕ ಮಂಡಳಿಗೆ ಅನೇಕ ಅಮೂಲ್ಯವಾದ ಸಲಹೆ ಸೂಚನೆಗಳನ್ನು ನೀಡುತ್ತಾ ನಮಗೆಲ್ಲಾ ಮಾರ್ಗದರ್ಶನ ಮಾಡುತ್ತಿದ್ದರು. ಅಂತಹ ಕರ್ಮಯೋಗಿಯನ್ನು ಕಳೆದುಕೊಂಡಿರುವುದು ನಮಗೆಲ್ಲಾ ತುಂಬಲಾರದ ನಷ್ಟವಾಗಿದೆ. ಭಗವಂತ ಆತ್ಮಕ್ಕೆ ಸದ್ಗತಿಯನ್ನು ನೀಡಲಿ ಎಂದು ಶಿಕ್ಷಕ ಸಮಾಚಾರದ ಸಂಪಾದಕ ಮಂಡಳಿ ಬೇಡುವುದರೊಂದಿಗೆ, ವಿನಮ್ರಪೂರ್ವಕ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

ಸಂಪಾದಕ



## ಸೂಕ್ತಿ

"ಶಿಕ್ಷಣವು ಕೇವಲ ಬೌದ್ಧಿಕ ಶಕ್ತಿಯನ್ನು ವಿಕಸನಗೊಳಿಸಿದರೆ ಸಾಲದು. ಅದು ಮನುಷ್ಯನ ಹೃದಯ ಮತ್ತು ಭಾವನೆಗಳ ಮೇಲೆ ಪ್ರಭಾವ ಬೀರಬೇಕು. ಈ ಪ್ರಭಾವದಿಂದ ವಿದ್ಯಾರ್ಥಿಗಳಲ್ಲಿ ದಯೆ ಮತ್ತು ಅನುಕಂಪ ಎಂಬ ಭಾವನೆಗಳು ಹುಟ್ಟಿಕೊಳ್ಳುತ್ತವೆ. ಮಾನವ ಕಲ್ಯಾಣವೇ ಶಿಕ್ಷಣದ ಮೊದಲ ಗುರಿಯಾಗಬೇಕು".

- ಡಾ॥ ಎಸ್. ರಾಧಾಕೃಷ್ಣನ್

## ಪರಿವಿಡಿ


- ಕೊರೋನಾ ಕಪಿಮುಷ್ಟಿಯಲ್ಲಿ ಶಿಕ್ಷಣ 3
- ಸ್ವಾತಂತ್ರ್ಯ ಹೋರಾಟದಲ್ಲಿ ದಿಟ್ಟ ಹೋರಾಟಗಾರ್ತಿ ಉಮಾಬಾಯಿ 4
- ತೆಂಗಿನಕಾಯಿ, ಒಂದು ಮುಷ್ಟಿ ಮಣ್ಣು, ಎರಡು ಹರಳು ಕಲ್ಲು 5
- ಗುರುವಂದನಾ ಕಾರ್ಯಕ್ರಮ 6
- ನನ್ನ ಶಾಲೆ ನನ್ನ ತೀರ್ಥಕ್ಷೇತ್ರ 8
- ವರದಿಗಳು 9
- ವಿದ್ಯಾರ್ಥಿ ಜ್ಞಾನ ಮಿತ್ರ 10
- ಚಿತ್ರಸುದ್ದಿ 11
- ಶ್ರದ್ಧಾಂಜಲಿ 12

# ಕೊರೋನಾ ಕಪಿಮುಷ್ಟಿಯಲ್ಲಿ ಶಿಕ್ಷಣ


**ವಿದ್ವಾನ್ ಡಾ॥ ವೆಂಕಟರಮಣ ದೇವರು ಭಟ್ಟ**
**ಪ್ರಧಾನಕಾರ್ಯದರ್ಶಿ, ಕ.ರಾ.ಮಾ.ಶಿ.ಸಂಘ**
**ಬೆಂಗಳೂರು ದಕ್ಷಿಣ ಜಿಲ್ಲೆ**




**ಸರ್ವೇ ಭವಂತು ಸುಖಿನಃ ಸರ್ವೇ ಸಂತು ನಿರಾಮಯಾಃ।**
**ಸರ್ವೇ ಭದ್ರಾಣಿ ಪಶ್ಯಂತು ಮಾ ಕಶ್ಚಿತ್ ದುಃಖಬಾಕ್ ಭವೇತ್॥**

ಎಲ್ಲರೂ ಸುಖದಿಂದಿರಲಿ, ಎಲ್ಲರೂ ಆರೋಗ್ಯದಿಂದಿರಲಿ, ಎಲ್ಲರೂ ಒಳ್ಳೆಯದನ್ನೇ ನೋಡಲಿ, ಯಾರೊಬ್ಬರೂ ದುಃಖವನ್ನು ಅನುಭವಿಸದಿರಲಿ ಎಂಬುದಾಗಿ ಭಾರತೀಯರಾದ ನಾವೆಲ್ಲರೂ ಮಾಡುತ್ತಿರುವ ಪ್ರತಿದಿನದ ಪ್ರಾರ್ಥನೆ.

ಆದರೆ ಪ್ರಪಂಚದ ಇಂದಿನ ಪರಿಸ್ಥಿತಿ ತೀವ್ರ ಆತಂಕಕ್ಕೀಡು ಮಾಡಿದೆ. ಸುದ್ದಿ ಮಾಧ್ಯಮಗಳೂ ಕೂಡ ಜನರಲ್ಲಿ ಒಂದು ರೀತಿಯ ಸಮ್ಮೋಹನವನ್ನು ಉಂಟುಮಾಡಿದೆ ಎಂದರೂ ತಪ್ಪಿಲ್ಲ. ಕಳೆದ ಒಂದು ವರ್ಷದಿಂದ ಪ್ರಪಂಚವು ಯಾರೂ ಕಂಡರಿಯದ, ಕೇಳರಿಯದ ಕೋವಿಡ್–19ರ ದುಷ್ಪರಿಣಾಮವನ್ನು ಅನುಭವಿಸುತ್ತಿದೆ. ಕೊರೋನಾಘಾತಕ್ಕೆ ಸಿಲುಕಿ ಜಗತ್ತು ನಲುಗಿ ಹೋಗಿದೆ. ಯಾವ ದೇಶದಲ್ಲಿ ನೋಡಿದರೂ ಪ್ರತಿನಿತ್ಯ ಲಕ್ಷಾಂತರ ಜನರ ಸಾವುನೋವುಗಳ ಆರ್ತನಾದ. ಇಡೀ ಪ್ರಪಂಚದ ಗತಿಯೇ ಸ್ತಬ್ಧವಾಗಿ ಬಿಟ್ಟಿದೆ. ವೈಜ್ಞಾನಿಕವಾಗಿ, ಆರ್ಥಿಕವಾಗಿ ಮುಂದುವರೆದವರೆಂದು ಹೆಮ್ಮೆಯಿಂದ ಬೀಗುತ್ತಿದ್ದ ದೇಶಗಳೂ ಸಹ ದಿಕ್ಕುಗಾಣದೆ ಅಸಹಾಯವಾಗಿವೆ. ಪ್ರಪಂಚದ ಆರ್ಥಿಕಸ್ಥಿತಿ ನೆಲಕಚ್ಚಿ ನಿಂತಿದೆ. ಒಮ್ಮೊಮ್ಮೆ ಯೋಚಿಸಿದಾಗ ದೇವರು ಎಷ್ಟು ಕ್ರೂರಿ, ನಿರ್ದಯಿ ಎನ್ನಿಸದೇ ಇರುವುದಿಲ್ಲ. ಆದರೆ ಅವನೇ ಸೃಷ್ಟಿಸಿದ ಈ ಸುಂದರ ಸೃಷ್ಟಿಯ ಈ ಸ್ಥಿತಿಗೆ ಅವನೇ ಕಾರಣನಾಗಲಾರ. ಇವೆಲ್ಲವೂ ಮನುಷ್ಯರ ಅತಿಯಾಸೆಯ ಪಾಪಗಳ ಫಲ ಎಂಬುವಂತದ್ದನ್ನೂ ಕೂಡ ಅಲ್ಲಗಳೆಯುವಂತಿಲ್ಲ. "ಸ್ವಕರ್ಮಸೂತ್ರ ಗ್ರಥಿತೋ ಹಿ ಲೋಕಃ" ಎಂಬಂತೆ ಮಾನವನು ತಾನು ಮಾಡುವ ಕರ್ಮಗಳೆಂಬ ದಾರದಿಂದ ಬಂಧಿಸಲ್ಪಟ್ಟಿದ್ದಾನೆ.

ಹಿರಿಯರಿಂದ ಹಿಡಿದು ಕಿರಿಯರವರೆಗೆ ಭಯದಿಂದ ದಿನವನ್ನು ದೂಡುವಂತಾಗಿದೆ. ಅದರಲ್ಲೂ ಭವಿಷ್ಯದ ಆಧಾರ ಸ್ತಂಭಗಳಾದ ಮಕ್ಕಳ ಸ್ಥಿತಿಯನ್ನಂತೂ ವರ್ಣಿಸುವಂತಿಲ್ಲ. ಅವರ ಶಿಕ್ಷಣದ ಮೇಲೆ ಕೊರೋನಾ ಕಾರ್ಮೋಡ ಆವರಿಸಿ ಅವರ ಹಕ್ಕನ್ನೇ ಕಸಿದುಕೊಂಡಂತಿದೆ. ಶಾಲೆಗೆ ಹೋಗಿ ಆಟ ಪಾಠಗಳಲ್ಲಿ ಗೆಳೆಯರೊಡನೆ ಸಂತೋಷದಿಂದ ಪಾಲ್ಗೊಳ್ಳುವಂತಿಲ್ಲ, ರಜಾ ಅಂತ ದೂರದ ಊರಿನಲ್ಲಿರುವ ಅಜ್ಜಿ, ತಾತಂದಿರ ಹತ್ತಿರ ಹೋಗಿ ಕಥೆಗಳನ್ನು ಕೇಳಿ ಆನಂದಿಸುವಂತಿಲ್ಲ, ಊರೂರುಗಳನ್ನು ಸುತ್ತಿ ಸಂಬಂಧಿಕರ ಸಂಗಡ ಬೆರೆಯುವಂತಿಲ್ಲ. ಮೊಬೈಲ್, ಲ್ಯಾಪ್‌ಟಾಪ್, ಕಂಪ್ಯೂಟರ್, ಟಿ.ವಿಗಳೇ ಅವರ ಸಂಗಾತಿಗಳಾಗಿಬಿಟ್ಟಿವೆ. ಇದರಿಂದ ಮಕ್ಕಳು ಬಗೆಬಗೆಯ ದೌರ್ಬಲ್ಯಗಳಿಗೆ ಒಳಗಾಗುತ್ತಿರುವುದನ್ನು ಕಂಡು ಶಿಕ್ಷಣತಜ್ಞರು, ಪಾಲಕರು ಮತ್ತು ಮನೋವಿಜ್ಞಾನಿಗಳು ಆತಂಕಕ್ಕೀಡಾಗಿದ್ದಾರೆ. ಈ ಕುರಿತು ಅನೇಕ ಸಂಶೋಧನಾ ಲೇಖನಗಳು ಪತ್ರಿಕೆಯಲ್ಲಿ ಆಗಾಗ ಬರುತ್ತಿರುವುದನ್ನು ನಾವು ನೋಡುತ್ತಿದ್ದೇವೆ.

2020–2021ನೇ ಶೈಕ್ಷಣಿಕ ವರ್ಷದಲ್ಲಿ ಕೋವಿಡ್–19ರ ಸಾಂಕ್ರಾಮಿಕ ಸಂಕಟದ ಸಮಯದಲ್ಲಿಯೂ ವಿದ್ಯಾರ್ಥಿಗಳ ಕಲಿಕೆಯಲ್ಲಿ ಉತ್ತೇಜನ ನೀಡುವ ಸಲುವಾಗಿ ಶಿಕ್ಷಣ ಇಲಾಖೆಯು ಅನೇಕ ಪ್ರಯೋಗಗಳನ್ನು ಮಾಡಿ ವಿದ್ಯಾರ್ಥಿಗಳ ಕಲಿಕೆಗೆ ಅನುಕೂಲಕರ ವಾತಾವರಣವನ್ನು ಉಂಟುಮಾಡಿದೆ. ಖಾಸಗಿ ಶಾಲೆಗಳು ಆನ್‌ಲೈನ್ ತರಗತಿಗಳನ್ನು ಪ್ರಾರಂಭಿಸಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೆಣಗಾಡಿದರೆ, ಸರ್ಕಾರಿ ಶಾಲೆಗಳಲ್ಲಿನ ಪರಿಸ್ಥಿತಿಯೇ ಬೇರೆ. ಇಂತಹ ವಿಷಮ ಪರಿಸ್ಥಿತಿಯಲ್ಲಿಯೂ ಮಾಜಿ ಶಿಕ್ಷಣ ಸಚಿವರಾದ ಶ್ರೀ ಸುರೇಶ್ ಕುಮಾರ್‌ರವರು ತೆಗೆದುಕೊಂಡ ನಿರ್ಧಾರ ಮತ್ತು ಶಿಕ್ಷಣ ಇಲಾಖೆ ಕೈಗೊಂಡ ಪ್ರಯತ್ನವನ್ನಂತೂ ಮೆಚ್ಚಲೇಬೇಕು. ವಿರೋಧದ ನಡುವೆಯೂ ಕೋವಿಡ್ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಪರೀಕ್ಷೆಗಳನ್ನು ಯಶಸ್ವಿಯಾಗಿ ನಡೆಸಿ ದೇಶಕ್ಕೆ ಮಾದರಿಯಾದರು. ಯಾವೊಬ್ಬ ವಿದ್ಯಾರ್ಥಿಯೂ ಶಿಕ್ಷಣದಿಂದ ವಂಚಿತನಾಗಬಾರದು ಎಂಬ ದೂರದೃಷ್ಟಿಯಿಂದ ಶಿಕ್ಷಕರೇ ಹಳ್ಳಿಹಳ್ಳಿಗಳಲ್ಲಿರುವ ವಿದ್ಯಾರ್ಥಿಗಳ ಬಳಿ ತೆರಳಿ ಕಲಿಸುವಂತಹ 'ವಿದ್ಯಾಗಮ' ಎಂಬ ಹೊಸ ಕಲಿಕಾ ತರಗತಿ ಎಲ್ಲರ ಅಭಿನಂದನೆಗೆ ಪಾತ್ರವಾಯಿತಲ್ಲದೇ, ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆಯೂ ಕೂಡ ವೃದ್ಧಿಗೊಂಡಿತು. DSERT ವತಿಯಿಂದ ಶಿಕ್ಷಕರ ಪಾಠಗಳನ್ನು ಸ್ಟುಡಿಯೋದಲ್ಲಿ ರೆಕಾರ್ಡ್‌ಮಾಡಿ ಚಂದನ ವಾಹಿನಿಯಲ್ಲಿ 'ಸಂವೇದ' ಕಾರ್ಯಕ್ರಮದಲ್ಲಿ ಪ್ರಸಾರ ಮಾಡುವುದರ ಮೂಲಕ ರಾಜ್ಯದಾದ್ಯಂತ ವಿದ್ಯಾರ್ಥಿಗಳಲ್ಲಿ ಕಲಿಕೆಗೆ ಒತ್ತು ನೀಡಿ ಪ್ರಶಂಸೆಗೆ ಪಾತ್ರವಾಯಿತು.

ಆದರೆ ಈ ಎಲ್ಲ ಪ್ರಯತ್ನಗಳೂ ಶಿಕ್ಷಣದ ಉದ್ದೇಶವನ್ನು ಸಂಪೂರ್ಣವಾಗಿ ಕಾರ್ಯರೂಪಕ್ಕೆ ತರಲು ಪರ್ಯಾಯ ವ್ಯವಸ್ಥೆಯನ್ನಾಗಿಸಲು ಸಾಧ್ಯವಾಗಲಿಲ್ಲ. ಪ್ರಾಥಮಿಕ ಮತ್ತು ಪೂರ್ವ ಪ್ರಾಥಮಿಕ ತರಗತಿಗಳು ಇದರಿಂದ ವಂಚಿತವಾಯಿತು ಮತ್ತು ಕಲಿಕಾ ಕೌಶಲ್ಯಗಳಾದ ಆಲಿಸುವಿಕೆ, ಮಾತನಾಡುವಿಕೆ, ಓದುವಿಕೆ, ಅರ್ಥೈಸಿಕೊಳ್ಳುವಿಕೆ ಮತ್ತು ಬರವಣಿಗೆ ಇವುಗಳನ್ನು ಪರಿಣಾಮಕಾರಿಯನ್ನಾಗಿ ಮಾಡಲು ಸಾಧ್ಯವಾಗುವುದಿಲ್ಲ. ಈಗ ನಮಗೆ ಅನುಭವಕ್ಕೆ ಬರುತ್ತಿದೆ ಗುರು–ಶಿಷ್ಯ ಸಂಬಂಧದ ಮಹತ್ವ, ಕಲಿಕೆಯಲ್ಲಿನ ಉತ್ತಮ ಗುಣಮಟ್ಟಕ್ಕೆ ಮತ್ತು ಸಂಸ್ಕಾರದ ಶಿಕ್ಷಣಕ್ಕೆ ಗುರು–ಶಿಷ್ಯರ ಮುಖಾಮುಖಿ ಅನಿವಾರ್ಯ. ಅದು ಮಕ್ಕಳ ಶಿಕ್ಷಣ, ಕಲಿಕೆ ಸಂವಹನ ಹಾಗೂ ವ್ಯಕ್ತಿತ್ವದ ಮೇಲೆ ಗಾಢವಾದ ಪರಿಣಾಮ ಬೀರುತ್ತದೆ. ಗುರುಗಳು ತರಗತಿಗಳಲ್ಲಿ ವಿದ್ಯಾರ್ಥಿಗಳೊಂದಿಗೆ ಅನ್ಯೋನ್ಯ ಸಂಬಂಧವನ್ನಿಟ್ಟುಕೊಂಡು ಪರಸ್ಪರ ಅವರ ಸಮಸ್ಯೆಗಳನ್ನು ಗುರುತಿಸಿ, ಅದಕ್ಕೆ ಸೂಕ್ತ ಪರಿಹಾರೋಪಾಯಗಳನ್ನು ತಿಳಿಸಿ, ಅವರನ್ನು ಪಾಠದ ಕಡೆಗೆ ತೊಡಗಿಸಿಕೊಳ್ಳುವುದರಿಂದಲೂ ಅವರಲ್ಲಿ ವಿಷಯವನ್ನು ಪರಿಣಾಮಕಾರಿಯಾಗಿಸಲು ಸಾಧ್ಯವಿದೆ. ತರಗತಿಯಲ್ಲಿ ವಿದ್ಯಾರ್ಥಿಗಳು ಶಿಕ್ಷಕರ ಜೊತೆಗೆ ಮುಕ್ತ ಮನಸ್ಸಿನಿಂದ ಮಾತನಾಡಿ ವಿಷಯದಲ್ಲಿನ ಗೊಂದಲವನ್ನು ಸಹಕರಿಸಿಕೊಳ್ಳಲು ಅವಕಾಶವಿದೆ. ತರಗತಿಯಲ್ಲಿ ಶಿಕ್ಷಕರು ಬೋಧನೆ ಮಾಡುವ ಸಂದರ್ಭದಲ್ಲಿ ಹಲವಾರು ಉದಾಹರಣೆಗಳನ್ನು, ದೃಷ್ಟಾಂತಗಳನ್ನು ಹೇಳುವುದರ ಜೊತೆಗೆ ಪಾಠಕ್ಕೆ ಸಂಬಂಧಿಸಿದಂತೆ ಪಾಠೋಪಕರಣಗಳನ್ನು ಬಳಕೆ ಮಾಡುವುದರಿಂದಲೂ ಅವರಲ್ಲಿ ಕಲಿಕಾ ಆಸಕ್ತಿಯನ್ನು ವೃದ್ಧಿಸಬಹುದು. ಅನೇಕ ದಿನಗಳ ನಂತರ ಅಂತಹ ಸುವರ್ಣ ಸಂದರ್ಭ ನಮಗಿಂದು ಒದಗಿದೆ. ದಿನಾಂಕ 23.08.2021ರಿಂದ ಶಾಲೆಗಳು ಕೆಲವು ಜಿಲ್ಲೆಗಳನ್ನು ಹೊರತುಪಡಿಸಿ 9ರಿಂದ 12ನೇಯ ತರಗತಿಯವರೆಗೆ ಪ್ರಾರಂಭವಾಗಲಿವೆ. ಶಿಕ್ಷಕರಾದ ನಾವು ಪೋಷಕರಿಗೆ ಶಾಲೆಗಳು ಕೊರೋನಾ ಹಂಚುವ ಕೇಂದ್ರಗಳಾಗುವುದಿಲ್ಲವೆಂಬ ಭರವಸೆಯನ್ನು ನೀಡಿ, ಸರ್ಕಾರವು ನೀಡಿರುವ ಮಾರ್ಗಸೂಚಿಗಳನ್ನು ತಪ್ಪದೇ ಪಾಲಿಸುತ್ತಾ, ಅನೇಕ ದಿನಗಳಿಂದ ಭೌತಿಕ ತರಗತಿಗಳಿಂದ ವಂಚಿತರಾಗಿರುವ ವಿದ್ಯಾರ್ಥಿಗಳನ್ನು ಶಾಲೆಯ ಕಡೆ ಆಕರ್ಷಿಸಿ, ಅವರು ಕಲಿಕೆಯತ್ತ ಮರಳುವಂತೆ ಮಾಡೋಣವೇ?

**ಯಾರನ್ನಾದರೂ ಸೋಲಿಸುವುದು ಬಹಳ ಸುಲಭ. ಆದರೆ ಇನ್ನೊಬ್ಬರನ್ನು ಜಯಿಸುವುದು ಕಷ್ಟ. – ಅಬ್ದುಲ್ ಕಲಾಂ**

# ಸ್ವಾತಂತ್ರ್ಯ ಹೋರಾಟದಲ್ಲಿ ದಿಟ್ಟ ಹೋರಾಟಗಾರ್ತಿ ಉಮಾಬಾಯಿ

**ಚಿದಾನಂದ ಆ. ಪಾಟೀಲ**
**ರಾಜ್ಯ ಪ್ರಧಾನಕಾರ್ಯದರ್ಶಿ**
**ಕ.ರಾ.ಮಾ.ಶಿ.ಸಂ.**



ಸ್ವಾತಂತ್ರ್ಯ ಹೋರಾಟದಲ್ಲಿ ದಿಟ್ಟ ಹೋರಾಟಗಾರ್ತಿ ಉಮಾಬಾಯಿ ನಮಗೆಲ್ಲ ಇಂದಿಗೂ ಪ್ರೇರಣೆ. ಯಾವ ಪುರಸ್ಕಾರಗಳನ್ನು ಇಚ್ಛಿಸದ ಮಹಿಳೆ. ಅಪ್ಪಟ ಕನ್ನಡ ನೆಲದಲ್ಲಿ ಬೆಳೆದವರು ಉಮಾಬಾಯಿ ಕುಂದಾಪುರ. ಅವರ ಬಗ್ಗೆ ಸ್ವಾತಂತ್ರ್ಯ ಗಳಿಸಿ 75 ವರ್ಷ ಗತಿಸಿರುವಂತಹ ಸಂದರ್ಭದಲ್ಲಿ ಸ್ಮರಿಸುವುದೇ ಒಂದು ಗೌರವದ ಕಾರ್ಯ ಎಂದು ಭಾವಿಸಿಕೊಳ್ಳುತ್ತಾ ಬ್ರಿಟಿಷರಿಗೆ ಸಿಂಹಸ್ವಪ್ನವಾಗಿದ್ದ ಉಮಾಬಾಯಿಯ ಬಗ್ಗೆ ನಾನು ಇಂದು ಪರಿಚಯಿಸುವೆ.

**ಕುಂದಾಪುರದಲ್ಲಿ ಉಮಾಬಾಯಿ :** ಕರ್ನಾಟಕದ ಕುಂದಾಪುರದ ಬ್ರಾಹ್ಮಣ ಕುಟುಂಬದ ಗೋಳಿಕೇರಿ ಕೃಷ್ಣರಾವ್ ಮತ್ತು ತಂಗಾಬಾಯಿಯ ಉದರದಲ್ಲಿ 25 ಮಾರ್ಚ 1892ರಲ್ಲಿ ಆರು ಜನ ಮಕ್ಕಳಲ್ಲಿ ಒಬ್ಬಳಾಗಿ ಜನಿಸಿದ ಉಮಾಬಾಯಿಯ ಪ್ರಾರಂಭದ ಹೆಸರು ಭವಾನಿ. ತನ್ನ 13ನೇ ವಯಸ್ಸಿನಲ್ಲಿ 1905 ರಲ್ಲಿ ಸಂಜೀವರಾವ್ ಕುಂದಾಪುರ ಅವರನ್ನು ಮದುವೆ ಮಾಡಿಕೊಂಡ ಮೇಲೆ ಇವರ ಶಿಕ್ಷಣಕ್ಕೆ ಬೆನ್ನೆಲುಬಾಗಿ ನಿಂತವರು ಮಾವನವರಾದ ಆನಂದರಾವ್ ಕುಂದಾಪುರ. ಆನಂದರಾವ್ ಅವರಲ್ಲಿದ್ದ ಸುಧಾರಣಾವಾದಿತನ ಮತ್ತು ಮಹಿಳಾ ಸಬಲೀಕರಣದ ಗುಣಗಳು ಇವರನ್ನು ಮೆಟ್ರಿಕ್ಯುಲೇಷನ್ ವಿದ್ಯಾಭ್ಯಾಸಕ್ಕಾಗಿ ಪೂನಾದ ಅಣ್ಣಾಸಾಹೇಬ್ ಕಾರ್ವೆ ಶಾಲೆಯನ್ನು ಸೇರುವಂತೆ ಮಾಡಿತು. 27ನೇ ವಯಸ್ಸಿನಲ್ಲಿ ಮೆಟ್ರಿಕ್ಯುಲೇಷನ್ ಮುಗಿಸಿದರು. ಇದು ದಕ್ಷಿಣ ಕನ್ನಡ ಭಾಗದಲ್ಲಿ ದೊಡ್ಡ ಸಾಧನೆಯಾಗಿತ್ತು. ಅದಕ್ಕಾಗಿ ಮುಂಬೈನ ಸಾರಸ್ವತ ಮಹಿಳಾ ಸಮಾಜವು ಅವರನ್ನು ಗೌರವಿಸಿ, ಮಹಿಳಾ ಸಮಾಜದ ಗೌರವ ಕಾರ್ಯದರ್ಶಿಯಾಗಿ ನೇಮಿಸಿತು. ತನ್ನ 31ನೇ ವರ್ಷದಲ್ಲಿ 28 ಮಾರ್ಚ 1923ರಲ್ಲಿ ಪತಿ ಸಂಜೀವರಾವ್ ಅವರನ್ನು ಕಳೆದುಕೊಂಡ ಉಮಾಬಾಯಿ ಬಾಂಬೆಯಿಂದ ಹುಬ್ಬಳ್ಳಿಗೆ ಬಂದು ನೆಲೆಸಬೇಕಾಯಿತು.

ಬಾಲಗಂಗಾಧರ ತಿಲಕರ ಮೃತದೇಹದ ಮೆರವಣಿಗೆ ಉಮಾಬಾಯಿ ಕುಂದಾಪುರ ಇವರಲ್ಲಿ ಸ್ವಾತಂತ್ರ್ಯ ಹೋರಾಟದ ಕಿಚ್ಚು ಹೊತ್ತಿಸಿತು. ಈ ಕಿಚ್ಚು ಬೆಳೆದು ಕಾಡ್ಗಿಚ್ಚು ಆಗುವುದಕ್ಕೆ ಬಹಳ ಸಮಯ ತೆಗೆದುಕೊಳ್ಳಲಿಲ್ಲ. ಮುಂದಿನ ದಿನಗಳಲ್ಲಿ 1920ರ ನಂತರ ಸ್ವಾತಂತ್ರ್ಯದ ಚಳುವಳಿಯ ಬೆಳವಣಿಗೆಯಲ್ಲಿ ತಮ್ಮದೇ ಆದ ಮಹತ್ವವಾದ ಪಾತ್ರ ವಹಿಸಿದರು. ತಿಲಕರ ಸಾವು ಮತ್ತು ಅಲ್ಲಿ ಸೇರಿದ್ದ ಜನರಲ್ಲಿ ಇದ್ದ ಸ್ವಾತಂತ್ರ್ಯ ಹೋರಾಟದ ಕಿಚ್ಚು ಅವರನ್ನು ಸ್ವ ಇಚ್ಛೆಯಿಂದ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕುವ ಪ್ರೇರಣೆ ನೀಡಿತು. ಅಸಹಕಾರ ಚಳುವಳಿಗಾಗಿ ಮಹಾತ್ಮಗಾಂಧೀಜಿಯವರು 04 ಸೆಪ್ಟೆಂಬರ್ 1920ರಲ್ಲಿ ಕರೆಕೊಟ್ಟಾಗ ಉಮಾಬಾಯಿ ಉತ್ಸಾಹದಿಂದ ಭಾಗವಹಿಸಿದರು. ಖಾದಿಯ ಬಗ್ಗೆ ಪ್ರಚಾರ ಮಾಡಲು ಪ್ರಾರಂಭಿಸಿದರು. ಮಹಿಳೆಯರನ್ನು ಸ್ವಾತಂತ್ರ್ಯದ ಚಳುವಳಿಯಲ್ಲಿ ಭಾಗವಹಿಸಲು ಪ್ರೇರೇಪಿಸಿದರು. ಚಳುವಳಿಯ ತೀವ್ರತೆ ಹರಡಲು ನಾಟಕಗಳನ್ನು ಬರೆದು ಪ್ರದರ್ಶಿಸಿದರು.

ಇದೇ ಸಂದರ್ಭದಲ್ಲಿ ಅಮೇರಿಕಾದಲ್ಲಿ ಎಂ.ಎಸ್. ಪದವಿ ಪಡೆದು ಸ್ವದೇಶಕ್ಕೆ ಮರಳಿದ ಡಾ॥ ನಾ.ಸು. ಹರ್ಡೀಕರ್ ಅವರು 1923ರಲ್ಲಿ ಯುವಕರನ್ನು ಸ್ವತಂತ್ರ ಸಂಗ್ರಾಮದಲ್ಲಿ ಭಾಗವಹಿಸಲು ಪ್ರೇರೇಪಿಸುವುದಕ್ಕಾಗಿ ಸಂಘಟಿಸಿದ ಹಿಂದೂಸ್ತಾನಿ ಸೇವಾದಳವನ್ನು ಪ್ರಾರಂಭಿಸಿದ್ದರು. ಇದು ಉಮಾಬಾಯಿಯವರಿಗೆ ಹೋರಾಟದ ಮನೋಭಾವವನ್ನು ಹೆಚ್ಚಿಸಲು ಸಹಾಯಕವಾಯಿತು. ಮುಂದೆ ಹಿಂದೂಸ್ತಾನ ಸೇವಾದಳದ ಮಹಿಳಾ ವಿಭಾಗದ ಮುಖ್ಯಸ್ಥೆಯಾಗಿ ಹಾಗೂ ತಿಲಕರ ಕನ್ಯಾ ಶಾಲೆಯ ಉಸ್ತುವಾರಿಯಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಲು ಯುವ ಜನಾಂಗವನ್ನು ಅದರಲ್ಲೂ ಮಹಿಳೆಯರನ್ನು ಪ್ರೇರೆಪಿಸಲು ಪ್ರಾರಂಭಿಸಿದರು.

ಬೆಳಗಾವಿಯಲ್ಲಿ 1924ರಲ್ಲಿ ಜರುಗಿದ್ದ ಕಾಂಗ್ರೆಸ್ ರಾಷ್ಟ್ರೀಯ ಸಮ್ಮೇಳನದಲ್ಲಿ ಹರ್ಡೀಕರ್ ಅವರ ಜೊತೆಯಲ್ಲಿ ಉಮಾದೇವಿ ಭಾಗವಹಿಸಿದರು ಮತ್ತು ಈ ಸಮ್ಮೇಳನಕ್ಕೆ ಹೆಚ್ಚು ಮಹಿಳೆಯರನ್ನು ಕರೆತಂದರು. ಅನೇಕ ಹೋರಾಟಗಾರರ ಪರಿಚಯವು ಅವರಿಗಾಯಿತು. ಮುಂದಿನ ದಿನಗಳಲ್ಲಿ ಆನಂದರಾಯರ ಮನೆ ಬ್ರಿಟಿಷರ ವಿರುದ್ಧದ ಮುದ್ರಣ ಘಟಕದ ಕೇಂದ್ರವಾಯಿತು. 1927–28ರಲ್ಲಿ ಕರ್ನಾಟಕ ಕಾಂಗ್ರೆಸ್ ಸಂಘಟನೆಯ ಉಪಾಧ್ಯಕ್ಷೆಯಾಗಿ ಆಯ್ಕೆಯಾದರು. ಈ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮನ್ನು ತಾವು ಪೂರ್ಣ ತೊಡಗಿಸಿಕೊಂಡರು. ಇದು ಬ್ರಿಟಿಷರ ಕೆಂಗಣ್ಣಿಗೆ ಗುರಿಯಾಗಲು ಕಾರಣವಾಯಿತು. 1932ರಲ್ಲಿ ಇವರನ್ನು ಬಂಧಿಸಿ ಯರವಾಡ ಜೈಲಿಗೆ ಕಳುಹಿಸಬೇಕಾಯಿತು. ಜೈಲಿನಲ್ಲಿ ಇದ್ದಾಗಲೇ ಆನಂದರಾವ್‌ರು ತೀರಿಕೊಂಡರು. ಜೈಲಿನಿಂದ ಹೊರ ಬಂದಾಗ ಬ್ರಿಟಿಷರು ಆನಂದರಾವ್‌ರು ನಡೆಸುತ್ತಿದ್ದ ಕರ್ನಾಟಕ ಪ್ರೆಸ್ ಪತ್ರಿಕೆಯನ್ನು ಮುಟ್ಟುಗೋಲು ಹಾಕಿಕೊಂಡಿದ್ದರು. ಕನ್ಯಾ ಶಾಲೆಯನ್ನು ಮುಚ್ಚಿದರು. ಭಗಿನಿ ಮಂಡಲವನ್ನು ಕಾನೂನು ಬಾಹಿರವೆಂದು ಘೋಷಿಸಿದ್ದರು. ಇವೆಲ್ಲವುಗಳಿಂದ ವಿಚಲಿತರಾಗದ ಉಮಾಬಾಯಿಯವರು ತಮ್ಮ ಮನೆಯನ್ನೇ ಸ್ವಾತಂತ್ರ್ಯ ಹೋರಾಟಗಾರರ ತಾಣವಾಗಿ ಮಾಡಿಕೊಂಡರು. ಭಾರತ ಬಿಟ್ಟು ತೊಲಗಿ ಚಳುವಳಿಯ ಸಂದರ್ಭದಲ್ಲಿ ಸ್ವಾತಂತ್ರ್ಯ ಚಳುವಳಿಯ ಅನೇಕ ಭೂಗತರಾಗಿದ್ದ ಹೋರಾಟಗಾರರಿಗೆ ಉಮಾಬಾಯಿಯವರ ಮನೆ ತಂಗುದಾಣವಾಗಿತ್ತು. ಸ್ವಾತಂತ್ರ್ಯ ಚಳುವಳಿಯಲ್ಲಿ ತುಂಬಾ ಅಪಾಯಕಾರಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು.

ಸ್ವಾತಂತ್ರ್ಯ ಹೋರಾಟದ ಜೊತೆಯಲ್ಲಿ ಸೇವಾ ಕಾರ್ಯವು ಇವರಿಗೆ ಇಷ್ಟವಾದ ಕಾರ್ಯವಾಗಿತ್ತು. ಹೀಗಾಗಿ 1934ರಲ್ಲಿ ಬಿಹಾರದಲ್ಲಿ ಭೂಕಂಪ ಸಂಭವಿಸಿದ ಸಂದರ್ಭದಲ್ಲಿ ಭೂಕಂಪ ಸಂತ್ರಸ್ತರಿಗೆ ಸಹಾಯಹಸ್ತ ನೀಡಿದರು. ಈ ಸಂದರ್ಭದಲ್ಲಿ ಅವರು ಬಾಬುರಾಜೇಂದ್ರಪ್ರಸಾದ್, ಜೀತರಾಮ್, ಭಗವಾನ್ ದಾಸ್ ಕೃಪಲಾನಿ ಇನ್ನಿತರ ರಾಷ್ಟ್ರೀಯ ನಾಯಕರ ಸಂಪರ್ಕಕ್ಕೆ ಬಂದರು. 1938ರಲ್ಲಿ ಬಾಂಬೆ ಪ್ರಾಂತೀಯ ವಯಸ್ಕರ ಶಿಕ್ಷಣ ಮಂಡಳಿಯು ಇವರನ್ನು ಮಹಿಳಾ ಪ್ರತಿನಿಧಿಯಾಗಿ ಆಯ್ಕೆ ಮಾಡಿತ್ತು ಮತ್ತು ಪೂನಾದ ಖ್ಯಾತ ಸಮಾಜ ಸೇವಕ ಎಸ್.ಆರ್ ಭಾಗವತ್ ಅವರ ಜೊತೆಯಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ಮಹಿಳೆಯರ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿದರು. ಹಾಗೆ ಮಹಾತ್ಮ ಗಾಂಧೀಜಿಯವರು ಸ್ಥಾಪಿಸಿದ್ದ ಕಸ್ತೂರ್ ಬಾ ಟ್ರಸ್ಟ್‌ನ ಕರ್ನಾಟಕ ಘಟಕಕ್ಕೆ ನಿರ್ವಾಹಕಿಯಾಗಿ 1946ರಲ್ಲಿ

ಪುಟ 9 ಕ್ಕೆ ➤

# ತೆಂಗಿನಕಾಯಿ, ಒಂದು ಮುಷ್ಟಿ ಮಣ್ಣು, ಎರಡು ಹರಳು ಕಲ್ಲು

**ನಂ. ನಾಗಲಕ್ಷ್ಮಿ**
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ಬೆಂಗಳೂರು



ತೆಂಗಿನಕಾಯಿ ಶುಭಕೋರಿಕೆಯ ಫಲ. ಮಣ್ಣು ಸ್ವದೇಶದ ಸಂಕೇತ. ಹರಳುಕಲ್ಲು ಕೋಟೆ– ಕೊತ್ತಳಗಳ ಅರ್ಥಾತ್ ಸಂರಕ್ಷಣೆಯ ಸಂಕೇತ. ಈ ಮೂರು ವಸ್ತುಗಳನ್ನು ಶಿವಾಜಿಯ ಉಡಿಯಲ್ಲಿ ಹಾಕಿ ಗುರು ಸಮರ್ಥರಾಮದಾಸರು ಆಶೀರ್ವದಿಸಿದ್ದರು. ಸ್ವದೇಶ ರಕ್ಷಣೆ ಪ್ರತಿಯೊಬ್ಬರ ಆದ್ಯಕರ್ತವ್ಯವಾಗಬೇಕೆಂಬುದೇ ಅವರ ಸಂದೇಶವಾಗಿತ್ತು. ಶಿವಾಜಿ ಮಹಾರಾಜ ಹಿಂದೂ ಸಾಮ್ರಾಜ್ಯ ಸ್ಥಾಪನೆಯ ಮಹಾನ್ ಕಾರ್ಯವನ್ನು ಕೈಗೊಂಡು ಸಫಲತೆ ಹೊಂದುವಲ್ಲಿ ಗುರುವಿನ ಈ ಆದೇಶದ, ಆಶೀರ್ವಾದದ ನುಡಿ ಮಹತ್ತ್ವದ ಪ್ರೇರಕಶಕ್ತಿಯಾಗಿ ಕೈಹಿಡಿದು ನಡೆಸಿತ್ತು.

ತುಕಾರಾಮರ ಆದೇಶದಂತೆ ಶಿವಾಜಿ ಮಹಾರಾಜ ಸಮರ್ಥರಾಮದಾಸರನ್ನು ಕಂಡು ನಮಸ್ಕರಿಸಿ ತನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಬೇಕೆಂದೂ, ಮುಕ್ತಿ ಸಾಧನೆಯ ಮಂತ್ರವನ್ನು ಉಪದೇಶಿಸಬೇಕೆಂದೂ ಬೇಡುತ್ತಾನೆ. ಆಗ ರಾಮದಾಸರು ನೀಡಿದ್ದ ಆದೇಶ ಹೀಗಿತ್ತು. “ ನಿನ್ನ ಕರ್ತವ್ಯವನ್ನು ಮೊದಲು ಪೂರೈಸು. ಇಡೀ ದೇಶ, ಹಿಂದೂ ಧರ್ಮ ಘಾಸಿಗೊಂಡಿದೆ. ಪರಕೀಯರ ಆಕ್ರಮಣ, ದಬ್ಬಾಳಿಕೆಗಳಿಂದ ಜನರ ಸ್ವಾತಂತ್ರ್ಯ ಹರಣವಾಗಿದೆ, ಅವರು ನಿರಾತಂಕವಾಗಿ, ಸ್ವತಂತ್ರವಾಗಿ ಬಾಳುವಂತೆ ಆಗಬೇಕು. ನೀನು ಸ್ವರಾಜ್ಯದ ಸಂಕಲ್ಪ ಮಾಡಿದ್ದೀಯೆ. ಅದನ್ನು ಮೊದಲು ಸಾಧ್ಯವಾಗುವಂತೆ ಮಾಡು. ಭಗವಂತ ನಿನಗೆ ತಾನಾಗಿಯೇ ಒಲಿಯುತ್ತಾನೆ. ನಿನ್ನ ಶಪಥದ ಪೂರೈಕೆಯೇ ಭಗವಂತನ ಆರಾಧನೆ” ಎಂದು ಕರ್ತವ್ಯವನ್ನು ಕುರಿತು ಎಚ್ಚರಿಸಿದ್ದರು. ಶಿವಾಜಿಯನ್ನು ಶಿಷ್ಯನೆಂದು ಸ್ವೀಕರಿಸುತ್ತ ಉಪದೇಶಿಸಿದ್ದರು. “ ಚಾಡಿಕೋರರನ್ನು, ಬಂಡಾಯಗಾರರನ್ನು ಕೊಲ್ಲತಕ್ಕದ್ದು. ವಹಿಸಿಕೊಂಡ ಯಾವುದೇ ಕೆಲಸವನ್ನು ಅರ್ಧಕ್ಕೆ ನಿಲ್ಲಿಸಬಾರದು. ಉದಾಸೀನತೆ ತೋರಬಾರದು. ಅಪಾಯಕ್ಕೆ ಹೆದರಿ ಎದೆಗುಂದಬಾರದು. ಜೀವಗಳ್ಳನು ಯೋಧನಾಗಲಾರ. ಧೈರ್ಯವೇ ಯಶಕ್ಕೆ ಸೋಪಾನ” ಗುರುವಿನ ಈ ಮಾರ್ಗದರ್ಶನದ ನುಡಿಗಳು ಶಿಷ್ಯನಿಗೆ ದಾರಿದೀಪವಾಗಿತ್ತು.

ಸಂತ ತುಕಾರಾಮರ ಕಥಾಸಂಕೀರ್ತನೆಯನ್ನು ಕೇಳಿದ ಶಿವಾಜಿ ಮಹಾರಾಜ ಅವರ ಅಮೃತವಾಣಿಯನ್ನು ಕೇಳಿ ತುಂಬ ಪ್ರಭಾವಿತರಾದರು. ಅವರಿಗೆ ವಂದಿಸುತ್ತಾ ‘ ಮಹಾರಾಜ್, ತಮ್ಮ ನುಡಿಗಳನ್ನು ಕೇಳಿ ನನ್ನ ಜೀವನ ಸಾರ್ಥಕವಾಯಿತು. ವಿಠಲನ ನಾಮಸಂಕೀರ್ತನದ ಮುಂದೆ ರಾಜ್ಯ, ರಾಜ್ಯಕಾರ್ಯಭಾರ ಇವೆಲ್ಲವೂ ತುಚ್ಛವೆನಿಸುತ್ತಿದೆ. ನನಗೆ ಗುರೂಪದೇಶ ನೀಡಿ. ಕತ್ತಿ, ಗುರಾಣಿಗಳ ಈ ಬರಡು ಜೀವನದಿಂದ, ಜಂಜಡದಿಂದ ನನ್ನನ್ನು ಮುಕ್ತಗೊಳಿಸಿ. ನಾನೂ ಭಕ್ತಿಪಂಥದ ಸೇವಕನಾಗಿ, ಹರಿನಾಮ ಸಂಕೀರ್ತನದಲ್ಲಿ ನನ್ನ ಮುಂದಿನ ಜೀವನವನ್ನು ಕಳೆಯುತ್ತೇನೆ” ಎಂದು ಪ್ರಾರ್ಥಿಸಿದ್ದನು. ತುಕಾರಾಮರಿಗೆ ಆಘಾತವಾಗಿತ್ತು. ನಾಡನ್ನು ಆಳಬೇಕಾದ ಕೈಗಳು ಕತ್ತಿಯನ್ನು ತೊರೆದು ತಂಬೂರಿ ಹಿಡಿದರೆ ಹೇಗೆ? ಎಂದು ಚಿಂತಿಸಿದರು. ಶಿವಾಜಿಯ ಬೆನ್ನುತಟ್ಟಿ ‘ನಿನಗೆ ಗುರೂಪದೇಶವನ್ನು ನೀಡಲು ಸಮರ್ಥರಾದವರೆಂದರೆ ಸಮರ್ಥ ರಾಮದಾಸರು ಮಾತ್ರ. ನೀನು ಅವರನ್ನು ಕಂಡು ಅವರು ಹೇಳಿದಂತೆ ನಡೆ” ಎಂದು ಆದೇಶಿಸಿದ್ದರು.

ತುಕಾರಾಮರ ಮಾತಿನಂತೆ ಸಮರ್ಥರಾಮದಾಸರನ್ನು ಕಂಡಾಗ ಅವರಿಂದ ದೇಶರಕ್ಷಿಸುವ, ಧರ್ಮ ಸಂಸ್ಥಾಪನೆ ಮಾಡುವ ಕರ್ತವ್ಯವನ್ನು ನಿರ್ವಹಿಸಬೇಕೆನ್ನುವ ಆದೇಶ ಸಿಕ್ಕಿತ್ತು. ಮುಂದಿನ ಗುರಿ ಏನೆಂಬುದು ಖಚಿತವಾಗಿತ್ತು. ಸಮರ್ಥರಾಮದಾಸರಿಗೆ ತಮ್ಮ ಚಿಂತನೆಯನ್ನು ಸಾಕಾರಗೊಳಿಸಬಲ್ಲ ವ್ಯಕ್ತಿ ಶಿವಾಜಿಯೇ ಎಂಬುದು ದೃಢವಾಗಿತ್ತು. ದೇಶದ ಸಮಸ್ತ ತೀರ್ಥಕ್ಷೇತ್ರಗಳನ್ನು ಸಂದರ್ಶಿಸುವಾಗ ದೇಶದಾದ್ಯಂತ ಸಂಚಾರ ಮಾಡುತ್ತ ಅವರು ಎಲ್ಲಕಡೆ ಜನರ ಪರಿಸ್ಥಿತಿಯನ್ನು ಗಮನಿಸಿದ್ದರು. ಪರಕೀಯರ ದಾಳಿಯಿಂದ ಕೊಳ್ಳೆಹೊಡೆಯಲ್ಪಟ್ಟ ಹಳ್ಳಿಗಳು, ನಗರಗಳು ಎಲ್ಲ ಕಡೆ ಜನಜೀವನ ಶೋಚನೀಯವಾಗಿದ್ದನ್ನು ಕಂಡಿದ್ದರು. ಉತ್ತರದಿಂದ ದಕ್ಷಿಣ ಭಾರತದ ಕಡೆ ಬಂದಾಗ ವಿಜಯನಗರ ಸಾಮ್ರಾಜ್ಯ ಅವನತಿ ಹೊಂದಿ ಕೆಲವೇ ದಶಕಗಳು ಕಳೆದಿದ್ದವು. ವಿದ್ಯಾರಣ್ಯರು ತಮ್ಮ ಆಧ್ಯಾತ್ಮಿಕ ಸಾಧನೆಯ ನಡುವೆಯೂ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ದುಡಿದಿದ್ದನ್ನು ರಾಮದಾಸರು ತಿಳಿದಿದ್ದರು. ಮಠಾಧೀಶರಾದ ವ್ಯಾಸರಾಯರು ಕೃಷ್ಣದೇವರಾಯನಿಗೆ ರಾಜಕಾರಣದಲ್ಲಿ ಸೂಕ್ತ ಸಲಹೆ, ಸೂಚನೆಗಳನ್ನು ನೀಡುತ್ತಿದ್ದರೆಂಬುದನ್ನೂ ಅರಿತಿದ್ದರು. ದೇಶ ಮತ್ತು ಧರ್ಮ ಅಪಾಯದಲ್ಲಿದ್ದಾಗ ಆಧ್ಯಾತ್ಮಿಕ ಸಾಧನೆಯನ್ನು, ವೈಯಕ್ತಿಕ ಮುಕ್ತಿ ಸಾಧನೆಯ ವಿಚಾರವನ್ನು ಬದಿಗೊತ್ತಿ ದೇಶ ಮತ್ತು ಧರ್ಮರಕ್ಷಣೆಗೆ ಮುಂದಾಗಬೇಕು ಎಂಬುದು ಈ ಎಲ್ಲ ಉದಾಹರಣೆಗಳಿಂದ ಅವರಿಗೆ ಸ್ಪಷ್ಟವಾಗಿತ್ತು.

ಮಾತೃಭೂಮಿಯ ರಕ್ಷಣೆ ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯ. ಗೃಹಸ್ಥ, ಸಂನ್ಯಾಸಿ ಎಂದಿಲ್ಲ. ರಾಜ, ಸೈನಿಕ, ಸಾಮಾನ್ಯ ಪ್ರಜೆ ಎಂಬ ತಾರತಮ್ಯವೂ ಸಲ್ಲ. ಸ್ವದೇಶವೇ ತಾಯಿ, ಸ್ವಧರ್ಮವೇ ತಂದೆ ಇವೆರಡರ ಸೇವೆ ಮಾಡುವುದೇ ಪರಮಕರ್ತವ್ಯ. ಮೊದಲು ಐಹಿಕ ಕರ್ತವ್ಯದ ನಿರ್ವಹಣೆ. ನಂತರ ಪರಮಾರ್ಥದ ಸಾಧನೆ. ಇದನ್ನೇ ರಾಮದಾಸರು ಶಿವಾಜಿಗೆ ಉಪದೇಶಿಸಿದ್ದು.

ಸೂಕ್ತ ಸಮಯದಲ್ಲಿ ಸೂಕ್ತ ರೀತಿಯಲ್ಲಿ ಶಿಷ್ಯನಿಗೆ ಮಾರ್ಗದರ್ಶನ ನೀಡುವವನೇ ಗುರುಸ್ಥಾನದಲ್ಲಿ ನಿಲ್ಲುವಂತಹವನು, ಸಮಾಜಮುಖಿಯಾದ ಕಾರ್ಯಗಳಲ್ಲಿ ತೊಡಗುವಂತೆ ಪ್ರೇರಣೆ ನೀಡಿ ಸಾರ್ಥಕ ಬದುಕಿಗೆ ದಾರಿ ತೋರುವವನೇ ನಿಜವಾದ ಗುರು.

ರಾಷ್ಟ್ರಭಕ್ತಿ, ಮಾತೃಭೂಮಿಯ ರಕ್ಷಣೆ, ಕರ್ತವ್ಯನಿಷ್ಠೆ ಮುಂತಾದ ಮೌಲ್ಯಗಳನ್ನು ಪ್ರತಿಯೊಬ್ಬ ಶಿಷ್ಯನ ಮನದಲ್ಲಿ ಬಿತ್ತಿ ಬೆಳೆಸುವುದೇ ಶಿಕ್ಷಕರ ಆದ್ಯಕರ್ತವ್ಯವಾಗಿರುತ್ತದೆ. ಆಗಲೇ ಪ್ರತಿಯೊಬ್ಬ ಶಿಕ್ಷಕ ಆದರ್ಶಶಿಕ್ಷಕರಾಗಲು ಸಾಧ್ಯ. ಸಮರ್ಥ ರಾಮದಾಸರು, ವಿದ್ಯಾರಣ್ಯರು, ವ್ಯಾಸರಾಯರಂತಹ ಅದೆಷ್ಟೋ ದೇಶಭಕ್ತ, ಆದರ್ಶ ಗುರುಗಳ ಪರಂಪರೆಯನ್ನು ಸ್ವಾತಂತ್ರ್ಯೋತ್ಸವದ ಅಮೃತವರ್ಷದ ಸಂದರ್ಭದಲ್ಲಿ ಸ್ಮರಿಸುತ್ತ ಪ್ರತಿಯೊಬ್ಬರಲ್ಲಿಯೂ ರಾಷ್ಟ್ರಭಕ್ತಿಯು ಜಾಗೃತವಾಗಲೆಂದು ಆಶಿಸೋಣ. ●

**ಯಶಸ್ಸಿನ ಸಾರ ಕಷ್ಟಪಡುವುದರಲ್ಲಿದೆ. – ಅಬ್ದುಲ್ ಕಲಾಂ**

# ಗುರುವಂದನಾ ಕಾರ್ಯಕ್ರಮ – ಗುಲ್ಬರ್ಗ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕರ ಸಂಘ ಜಿಲ್ಲಾ ಘಟಕ ಕಲ್ಬುರ್ಗಿ ವತಿಯಿಂದ ಆರ್ ಜೆ ಪಿಯು ಕಾಲೇಜಿನಲ್ಲಿ ಗುರುವಂದನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಮುಖ್ಯ ಉಪನ್ಯಾಸಕರಾಗಿ ಆಗಮಿಸಿದ್ದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಉತ್ತರ ಕರ್ನಾಟಕ ಪ್ರಾಂತ ಬೌದ್ಧಿಕ ಪ್ರಮುಖರಾದ ಶ್ರೀ ಕೃಷ್ಣ ಜೋಶಿಯವರು ಮಾತನಾಡುತ್ತಾ ಆಷಾಢ ಮಾಸ ಶುಕ್ಲಪಕ್ಷದ ಹುಣ್ಣಿಮೆಯ ದಿವಸವನ್ನು ಗುರುಪೌರ್ಣಿಮೆ ಎಂದು ಆಚರಿಸುವ ಸಂಪ್ರದಾಯ ಅನಾದಿ ಕಾಲದಿಂದಲೂ ಇದೆ. ಮಹರ್ಷಿ ವೇದವ್ಯಾಸರೇ ಈ ಗುರುಪರಂಪರೆಗೆ ಬುನಾದಿ ಹಾಕಿದ್ದಾರೆ ಎಂದು ಹೇಳಿದರು. ಗುರುಪರಂಪರೆ ಭಾರತದಲ್ಲಿ ಅತ್ಯಂತ ಅದ್ಭುತವಾಗಿದೆ, ಗುರು–ಶಿಷ್ಯರ ಪರಂಪರೆಯಲ್ಲಿ ಎರಡು ಗುಂಪುಗಳಿವೆ. ಶಿಷ್ಯರು ಗುರುಗಳು ಹೇಳಿರುವುದನ್ನು ಯೋಚಿಸದೆ ತಕ್ಷಣ ಕಾರ್ಯಪ್ರವೃತ್ತರಾಗುವ ಒಂದು ಗುಂಪು, ಗುರುಗಳನ್ನು ಪರೀಕ್ಷಿಸಿ ಶಿಷ್ಯರಾಗುವುದು ಇನ್ನೊಂದು ಗುಂಪು. ಸ್ವಾಮಿವಿವೇಕಾನಂದರು ರಾಮಕೃಷ್ಣರನ್ನು ಪರೀಕ್ಷಿಸಿ ಗುರುಗಳಾಗಿ ಸ್ವೀಕರಿಸಿದರು. ಬ್ರಹ್ಮ, ವಿಷ್ಣು, ಮಹೇಶ್ವರಗಿಂತ ಹೆಚ್ಚು ಶಕ್ತಿ ಗುರುವಿಗೆ ಇದೆ. ಇದನ್ನು ಅರಿತೇ ಹರ ಮುನಿದರೆ ಗುರು ಕಾಯುವನು ಎಂಬ ಗಾದೆ ಮಾಡಿದ್ದಾರೆ. ಅಂದರೆ ದೇವರು ಮುನಿದಾಗ ಶಿಷ್ಯನನ್ನು ಕಾಪಾಡುವುದಕ್ಕಾಗಿ ದೇವರನ್ನು ಎದುರು ಹಾಕಿಕೊಂಡು ಗುರು ರಕ್ಷಣೆ ಮಾಡುತ್ತಾನೆ. "ಜಾತಿಯಿಂದ ಯಾರೂ ದೊಡ್ಡವರಲ್ಲ, ಕೃತಿಯಿಂದ ದೊಡ್ಡವರು. ಅದಕ್ಕಾಗಿ ಅಂಬೇಡ್ಕರ್ ಸಂವಿಧಾನ ರಚಿಸಿದರು. ವ್ಯಾಸರು ಮಹಾಭಾರತ ಬರೆದರು, ವಾಲ್ಮೀಕಿ ರಾಮಾಯಣ ಬರೆದರು. ಇವರೆಲ್ಲ ತಮ್ಮ ಪ್ರತಿಭೆಯಿಂದ ಗುರುತಿಸಿಕೊಂಡವರು" ಎಂದು ಅಭಿಪ್ರಾಯಪಟ್ಟರು. ಗುರು ತನ್ನಿಂದ ಸಾಧ್ಯವಾಗದ ಕೆಲಸವನ್ನು ಶಿಷ್ಯರಿಂದ ಮಾಡಿಸುತ್ತಾನೆ ಉದಾಹರಣೆಗೆ ರಾಮಕೃಷ್ಣ ಪರಮಹಂಸರು ಸ್ವಾಮಿವಿವೇಕಾನಂದರಿಂದ ವಿಶ್ವವನ್ನೇ ಗೆದ್ದು ಜಗತ್ತಿನಲ್ಲಿ ಭಾರತವನ್ನು ಧ್ರುವತಾರೆ ಮಾಡಿದರು ಎಂದು ಹೇಳಿದರು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕರ ಸಂಘ ಜಿಲ್ಲಾ ಘಟಕ ಕಲ್ಬುರ್ಗಿ ಇವರು ಮಾಡಿರುವ ಗುರುವಂದನ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿದೆ. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಸುಮಾರು ಐವತ್ತಾರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದೆ. ಇದು ಶಿಕ್ಷಕರ ಸಮಸ್ಯೆಗಳ ಕುರಿತು ಕೇವಲ ಹೋರಾಟವನ್ನು ರೂಪಿಸುವುದಷ್ಟೇ ಅಲ್ಲದೇ, ಭಾರತೀಯ ಸಂಸ್ಕೃತಿಯನ್ನು ಬೆಳೆಸುವ ಕಾರ್ಯವನ್ನು ಮಾಡುತ್ತಿದೆ. ಇದರ ಮೂಲಕ ಸಾವಿರಾರು ಶಿಕ್ಷಕರು ಸಮಾಜ ಮತ್ತು ದೇಶಕ್ಕೆ ಮಾದರಿಯಾಗಿದ್ದಾರೆ. ಈ ಕಾರ್ಯಕ್ರಮದ ಸಾರ್ಥಕತೆಯೂ ಬಂದಿರುವ ಶಿಕ್ಷಕರು ತಮ್ಮ ತಮ್ಮ ಕ್ಷೇತ್ರದಲ್ಲಿ ಸಾಧನೆ ಮಾಡಿದಾಗ ಅರ್ಥಪೂರ್ಣವಾಗುವುದು ಎಂದು ಹೇಳಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಹಿರಿಯ ಸಹಾಯಕ ನಿರ್ದೇಶಕರು, ಅಪರ ಆಯುಕ್ತರ ಕಾರ್ಯಾಲಯ ಕಲ್ಬುರ್ಗಿಯ ಶ್ರೀ ಚನ್ನಬಸಪ್ಪ ಮುಧೋಳ ಅವರು ಶಿಕ್ಷಕ ಮತ್ತು ಗುರು ಈ ಎರಡು ಪದಗಳ ಮಧ್ಯೆ ಇರುವ ವ್ಯತ್ಯಾಸವರಿಯಬೇಕು. ಮೊದಲು ಗುರುಗಳಾಗಿ ಅನಂತರ ಶಿಕ್ಷಕರಾಗುವವರು ಈ ಜಗತ್ತನ್ನೇ ಬದಲಾಯಿಸುವ ಶಕ್ತಿ ಹೊಂದುತ್ತಾರೆ. ಇಂತಹ ಸಾಮರ್ಥ್ಯ ಇರುವುದು ಶಿಕ್ಷಕರಿಗೆ ಮಾತ್ರ. ಶಿಕ್ಷಕರಾದ ನಾವು ನಮಗಾಗಿ ಅಲ್ಲದೆ ನಮ್ಮನ್ನು ಬೆಳೆಸಿದ ಸಮಾಜ, ದೇಶವನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಹೊರಬೇಕು ಎಂದರು. ಅಧ್ಯಕ್ಷತೆ ವಹಿಸಿಕೊಂಡು ಮಾತನಾಡಿದ ಕಾಲೇಜಿನ ಪ್ರಾಂಶುಪಾಲರಾದ ಡಾಕ್ಟರ್ ಬುರ್ಲಿ ಪ್ರಹ್ಲಾದರವರು ಶಿಕ್ಷಕರು ಪಾಠ ಮಾಡುವಾಗ ತನ್ನ ಮಕ್ಕಳೆಂದು ತಿಳಿದು ಮಾಡಿದಾಗ ಮಾತ್ರ ಸಾರ್ಥಕವಾಗುತ್ತದೆ ಎಂದು ಹೇಳಿದರು. ಕರ್ನಾಟಕ ರಾಜ್ಯ ಮಾಧ್ಯಮ ಶಿಕ್ಷಕ ಸಂಘದ ವಿಭಾಗ ಪ್ರಮುಖ ಶ್ರೀ ಮಹೇಶ ಬಸರಕೋಡ ಪ್ರಾಸ್ತಾವಿಕವಾಗಿ ಮಾತನಾಡಿ ಮಾಧ್ಯಮಿಕ ಶಿಕ್ಷಕ ಸಂಘವು ಸುಮಾರು ಐವತ್ತಾರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದೆ. ಇದು ಕೇವಲ ಶಿಕ್ಷಕರ ಸಮಸ್ಯೆಗಳ ಕುರಿತು ಹೋರಾಟವನ್ನು ರೂಪಿಸುವುದಷ್ಟೇ ಅಲ್ಲದೆ, ಭಾರತೀಯ ಸಂಸ್ಕೃತಿಯನ್ನು ಬೆಳೆಸುವ ಕಾರ್ಯವನ್ನು ಮಾಡುತ್ತದೆ ಹಾಗೂ ಶಿಕ್ಷಕರಿಗಾಗಿ ಸಂಕಲ್ಪದಿನ, ಸದಸ್ಯತ್ವ ಅಭಿಯಾನ, ಶಿಕ್ಷಕರಿಗೆ ತರಬೇತಿ ಕಾರ್ಯಾಗಾರಗಳು, ಪ್ರತಿಭಾ ಪುರಸ್ಕಾರ ಹೀಗೆ ವಿವಿಧ ಆಯಾಮಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಶಿಕ್ಷಕರು ಆತ್ಮವಿಮರ್ಶೆ ಮಾಡಿಕೊಂಡು ಕಾರ್ಯನಿರ್ವಹಿಸಬೇಕು. ಮಾನ್ಯ ಶ್ರೀ ಕೃ ನರಹರಿ ಅವರಂತಹ ಹಿರಿಯರ ಸ್ಫೂರ್ತಿಯ ಮೂಲಕ ಸಂಘವು ಈ ಕಾರ್ಯವನ್ನು ಮಾಡುತ್ತಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಮಾಧ್ಯಮಿಕ ಶಿಕ್ಷಕ ಸಂಘದ ಜಿಲ್ಲಾಧ್ಯಕ್ಷರಾದ ಶ್ರೀ ಚಂದ್ರಶೇಖರ್ ಪಾಟೀಲ್, ಉಪಾಧ್ಯಕ್ಷರಾದ ಚಂದ್ರಶೇಖರ್ ಗೋಸಲ್ ಕಾರ್ಯದರ್ಶಿ ಶ್ರೀ ಸಂಜುಕುಮಾರ್ ಪಾಟೀಲ್ ಹಾಗೂ ವಿವಿಧ ಶಿಕ್ಷಕ ಉಪನ್ಯಾಸಕ ಬಂಧುಗಳು ಭಾಗವಹಿಸಿದ್ದರು.

# ಗುರುವಂದನಾ ಕಾರ್ಯಕ್ರಮ – ಬೆಳಗಾವಿ

ನಗರದ ಬಿ.ಕೆ ಮಾಡಲ್ ಪ್ರೌಢಶಾಲೆಯ ಸಭಾಂಗಣದಲ್ಲಿ 5–8–21 ರಂದು ಬೆಳಗಾವಿ ಜಿಲ್ಲೆ ಹಾಗೂ ನಗರ ವತಿಯಿಂದ ಗುರುವಂದನಾ ಕಾರ್ಯಕ್ರಮ ನೆರವೇರಿತು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಬೆಳಗಾವಿ ಜಿಲ್ಲಾ ಖಜಾನೆಯ ಸಹ–ನಿರ್ದೇಶಕರಾದ ಶ್ರೀ.ಎಸ್.ವಿ ಹಲ್ಯಾಳ ಹಾಗೂ ಶ್ರೀ ರವಿ ಭಜಂತ್ರಿ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ನಗರವಲಯ ಬೆಳಗಾವಿ ಇವರು ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಳಗಾವಿ ಜಿಲ್ಲೆಯ ಉಪಾಧ್ಯಕ್ಷರಾದ ಶ್ರೀ ವಿಶ್ವಜೀತ ಹಸಬೆಯವರು ವಹಿಸಿದ್ದರು. ಬೌದ್ಧಿಕ ಮಾರ್ಗದರ್ಶಕರಾಗಿ ಶ್ರೀ ಪರಮೇಶ್ವರಜಿ ಹೆಗಡೆ, ಅಧ್ಯಕ್ಷರು ವಿದ್ಯಾಭಾರತಿ, ಕರ್ನಾಟಕ ರಾಜ್ಯ, ಶ್ರೀ ಆರ್.ಪಿ ವಂಟಗುಡಿ, ರಾಜ್ಯ ಕಾರ್ಯದರ್ಶಿಗಳು, ಶ್ರೀಮತಿ ಎಸ್.ಎ.ಚಾಟೆ ಪ್ರಭಾರಿ ಮುಖ್ಯೋಪಾಧ್ಯಪಕಿ, ಶ್ರೀ ಉಮೇಶ್ ಕುಲಕರ್ಣಿ, ಜಿಲ್ಲಾ ಕಾರ್ಯದರ್ಶಿಗಳು, ಶ್ರೀ ಸಂಜೀವ ಕೋಷ್ಠಿ ನಗರ ಅಧ್ಯಕ್ಷರು ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಕಾರ್ಯಕ್ರಮವು ಶ್ರೀಮತಿ ವೀಣಾ ಪಾಟೀಲ ಅವರ ಸರಸ್ವತಿಯ ಗೀತೆಯೊಂದಿಗೆ ಪ್ರಾರಂಭವಾಯಿತು. ಪ್ರಾಸ್ತಾವಿಕ ಭಾಷಣ ಉಮೇಶ್ ಕುಲಕರ್ಣಿಯವರು ಮಾಡಿದರು. ಅತಿಥಿಗಳಿಗೆ ವಿಶ್ವಾಸ ಗಾವಡೆಯವರು ಸ್ವಾಗತ ಕೋರಿದರು. ಸುರೇಶ ಕಲ್ಲೇಕರ್ ಅವರು ಅತಿಥಿಗಳ ಪರಿಚಯ ಮಾಡಿದರು. ಗುರುವ್ಯಾಸರ ಹಾಗೂ ಭಾರತ ಮಾತೆಯ ಭಾವಚಿತ್ರಕ್ಕೆ ಗಣ್ಯರಿಂದ ಪೂಜೆ ಸಲ್ಲಿಸಲಾಯಿತು. ಆರ್.ಪಿ ವಂಟಗುಡಿಯವರು ಅತಿಥಿಗಳಿಗೆ ಪುಷ್ಪ ನೀಡಿ ಸತ್ಕರಿಸಿದರು. ಶ್ರೀ ಪರಮೇಶ್ವರಜಿ ಹೆಗಡೆಯವರು ಬೌದ್ಧಿಕ ನುಡಿಗಳಲ್ಲಿ ಪ್ರಾಚೀನ ಕಾಲದ ವೇದ ಉಪನಿಷತ್ತುಗಳನ್ವಯ ಗುರುಕುಲಗಳಲ್ಲಿ ಗುರುಗಳ ಮಹತ್ವ ಹೇಗಿತ್ತು? ಎಂಬುದರ ಕುರಿತು ಮಾತನಾಡಿದರು. ಶ್ರೀ ಎಸ್.ವಿ ಹಲ್ಯಾಳ ಅವರು ಸಂತ ಶಿಶುನಾಳ ಶರೀಫ ಸಾಹೇಬರ ಹಾಗೂ ಗುರುಗೋವಿಂದ ಭಟ್ಟರ ಸಂಬಂಧ ಹೇಗೆ ಅನನ್ಯವಾಗಿತ್ತು? ಎಂಬುದರ ಕುರಿತು ಮಾತನಾಡುತ್ತ, ಇಂದಿನ ಶಿಕ್ಷಕರು ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಶಿಕ್ಷಣ ನೀಡಬೇಕಾಗಿರುವ ಅವಶ್ಯಕತೆಯ ಕುರಿತು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಶ್ರೀ ರವಿ ಭಜಂತ್ರಿ ಅವರು ಸಮಾಜ ಸುಧಾರಣೆಗೆ ಗುರುಗಳ ಪಾತ್ರದ ಕುರಿತು ಮಾತನಾಡಿದರು. ಅಧ್ಯಕ್ಷರ ಭಾಷಣದೊಂದಿಗೆ ಕಾರ್ಯಕ್ರಮವು ಮುಕ್ತಾಯಗೊಂಡಿತು.

ಕಾರ್ಯಕ್ರಮಕ್ಕೆ ಮಾಜಿ ಜಿಲ್ಲಾಧ್ಯಕ್ಷರಾದ ಆರ್.ಆರ್ ಕುಡತುರಕರ, ಜಿಲ್ಲಾ ಘಟಕ, ನಗರ ಘಟಕದ ಪದಾಧಿಕಾರಿಗಳು ಸೇರಿದಂತೆ ನಗರದ 120 ಶಿಕ್ಷಕರು ಹಾಜರಿದ್ದರು. ಕಾರ್ಯಕ್ರಮವನ್ನು ಶ್ರೀ ರಾಮಚಂದ್ರ ಭಟ್ಟರವರು ನಿರೂಪಿಸಿದರು. ಶ್ರೀ ಎಂ.ಬಿ ಅಂಗಡಿಯವರು ವಂದನಾರ್ಪಣೆ ಸಲ್ಲಿಸಿದರು.

# ಗುರುವಂದನಾ ಕಾರ್ಯಕ್ರಮ – ಹುಬ್ಬಳ್ಳಿ

ಗುರು ಪ್ರತಿಯೊಬ್ಬ ವ್ಯಕ್ತಿಯ ಜೀವನ ಯಾತ್ರೆಯಲ್ಲಿ ಮನುಕುಲದ ಒಳಿತಿಗಾಗಿ ತನ್ನ ಬದುಕನ್ನು ಸಮರ್ಪಣಾಭಾವ, ನಿಸ್ವಾರ್ಥ ಸೇವೆಯಿಂದ ತೊಡಗಿಸಿಕೊಂಡಿರುವ ಸಂತ. ಗುರುಗಳು ಇತಿಹಾಸದಲ್ಲಿ ತಮ್ಮ ಸಾಧನೆಯ ಹೆಜ್ಜೆಯ ಗುರುತುಗಳನ್ನು ಸ್ಥಾಪಿಸಿಕೊಂಡು ಮಾದರಿಯಾಗುತ್ತಾರೆ. ಶಿಕ್ಷಕನ ಜೀವನ ಯಾತ್ರೆಯು ಮನುಕುಲದ ಏಳ್ಗೆಗಾಗಿ ಆದರ್ಶಪ್ರಾಯವಾಗಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಜೇಷ್ಠ ಪ್ರಚಾರಕರಾದ ಸು. ರಾಮಣ್ಣ ಹೇಳಿದರು. ಅವರು ನಗರದ ಪಿ. ಸಿ. ಜಾಬಿನ್ ಕಾಲೇಜಿನಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಹಾಗೂ ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕ ಸಂಘ ಏರ್ಪಡಿಸಿದ್ದ ಗುರುವಂದನಾ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡಿದರು.

ಶಿಕ್ಷಕನಿಗೆ ಕಲಿಸುವುದು ಕೇವಲ ವೃತ್ತಿ ಮಾತ್ರವಲ್ಲ, ಜ್ಞಾನ ಪಸರಿಸುವ ಜೀವನ ಯಾತ್ರೆ. ಶಿಕ್ಷಕ ವಿದ್ಯಾರ್ಥಿಗಳಿಗೆ ಉತ್ತಮ ಚಾರಿತ್ರ್ಯ ನಿರ್ಮಿಸುವುದಲ್ಲದೆ ನೈತಿಕ, ತರ್ಕಬದ್ಧ, ಸಹಾನುಭೂತಿ ಮತ್ತು ಕಾಳಜಿಯುಳ್ಳ ವ್ಯಕ್ತಿಗಳನ್ನಾಗಿ ಸಿದ್ಧಪಡಿಸುವುದು. ಗುರು ಮತ್ತು ಶಿಕ್ಷಕರ ನಡುವೆ ಅಂತರ ಬಹಳಷ್ಟಿದೆ. ಶಿಕ್ಷಕನಾದವನು 60 ವರ್ಷಕ್ಕೆ ನಿವೃತ್ತನಾಗಿ ಪಿಂಚಣಿ ಸೌಲಭ್ಯ ಪಡೆದರೆ ಗುರುಗಳಿಗೆ ನಿವೃತ್ತಿ ಅನ್ನುವುದೇ ಇರುವುದಿಲ್ಲ. ಅಷ್ಟೇ ಅಲ್ಲದೆ ಪಗಾರವನ್ನೆ ತೆಗೆದುಕೊಳ್ಳುವುದಿಲ್ಲ. ಪ್ರಾಚೀನದ ಗುರುಗಳು ವ್ಯಕ್ತಿಗತವಾದ ಮಹತ್ವಾಕಾಂಕ್ಷೆಗೆ ಪ್ರಾಧಾನ್ಯತೆ ಕೊಡದೆ, ಶಿಷ್ಯರ ಜೀವನಕ್ಕೆ ಹಿರಿದಾದ ಗುರಿಯನ್ನು ಕೊಡುತ್ತಿದ್ದರು. ನೀನು ಒಂಟಿಯಲ್ಲ, ವಿಶಾಲವಾದ ಈ ಸಮಾಜ ಅವಿಭಾಜ್ಯ ಅಂಗ. ಈ ವಿಶ್ವದ ಅವಿಭಾಜ್ಯ ಅಂಗ. ಅಷ್ಟೇ ಅಲ್ಲ ಸೃಷ್ಠಿಯ ಅವಿಭಾಜ್ಯ ಅಂಗವು ಹೌದು. ಹೀಗಾಗಿ ನಿನ್ನನ್ನು ಬೆಳೆಸುವ ಕುಟುಂಬ, ಶಾಖೆ, ಸಮುದಾಯ, ನಿನ್ನ ಊರು, ದೇಶ, ಜಗತ್ತು ಇದರ ಕಲ್ಯಾಣಕ್ಕೋಸ್ಕರ ಬದುಕಬೇಕು ಎನ್ನುವ ಹಿರಿದಾದ ಗುರಿಯನ್ನು ಕೊಡುತ್ತಿದ್ದರು. ಹಕ್ಕುಗಳನ್ನು ಎಂದೂ ಕಲಿಸುತ್ತಿರಲಿಲ್ಲ. ಕರ್ತವ್ಯವನ್ನು ವಿದ್ಯಾರ್ಥಿಗಳಲ್ಲಿ ಅರಳಿಸುತ್ತಿದ್ದರು. ಹೀಗಾಗಿ ಗುರುವನ್ನು ಈ ದೇಶ "ಆಚಾರ್ಯ ದೇವೋ ಭವ" ಎಂದಿದೆ ಎಂದು ಹೇಳಿದರು.

ಡಾ. ಎಸ್. ಜಿ. ಮೀಸೆ ನಿವೃತ್ತರಾದ ನಿಮಿತ್ತ ಫಲಪುಷ್ಪ ಸ್ಮರಣಿಕೆಯನ್ನು ಸಲ್ಲಿಸುವುದರ ಮೂಲಕ ಸನ್ಮಾನಿಸಲಾಯಿತು. ಡಾ. ಶ್ರೀನಿವಾಸ ಕೊಪ್ಪಳ ಕಾರ್ಯಕ್ರಮ ನಿರೂಪಿಸಿದರು. ಡಾ. ವಿಜಯಲಕ್ಷ್ಮೀ ಚಿಕಲವಾಡರವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಡಾ. ಸಿ. ವ್ಹಿ. ಮರಿದೇವರಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ಕಾಲೇಜಿನ ಪ್ರಾಚಾರ್ಯರಾದ ಡಾ. ಲಿಂಗರಾಜ ಹೊರಕೇರಿ, ಕೆ.ಆರ್.ಎಮ್.ಎಸ್.ಎಸ್. ಅಧ್ಯಕ್ಷರಾದ ಡಾ. ರಘು ಅಕಮಂಚಿ ಹಾಗೂ ಮಾಧ್ಯಮಿಕ ಶಿಕ್ಷಕ ಸಂಘದ ಅಧ್ಯಕ್ಷ ಸಂದೀಪ ಬೂದಿಹಾಳ, ಪ್ರಧಾನ ಕಾರ್ಯದರ್ಶಿ ಡಾ. ಜಿ. ಕೆ. ಬಡಿಗೇರ, ಬಸವರಾಜ ದೇವರಮನಿ ಉಪಸ್ಥಿತರಿದ್ದರು. ಡಾ. ರಾಜಕುಮಾರ ಪಾಟೀಲ ವಂದಿಸಿದರು.

ವರದಿ : ಸಂದೀಪ ಬೂದಿಹಾಳ

ಆಳವಾಗಿ ಮನಸ್ಸಿನಲ್ಲಿ ಚಿಂತಿಸಿ ನೋಡು – ಗೋವಿಂದನಿಗಿಂತಲೂ ಗುರುವೇ ಶ್ರೇಷ್ಠನು. ಏಕೆಂದರೆ, ದೇವರ ಸೃಷ್ಟಿಯಲ್ಲಿ ಪುನರ್ ಜನ್ಮವಿದೆ ; ಆದರೆ ಗುರುವಿನ ಕೃಪೆ ಅದನ್ನು ದಾಟಿಸುವುದು.

'ನಾರಿ ನರಕಕ್ಕೆ ದಾರಿ ಎನ್ನಬೇಡ'. ಆಕೆ ಸಂತರಿಗೆ ಜನ್ಮ ಕೊಟ್ಟವಳು. ಭಕ್ತರನ್ನು ಹಡೆಯುವ ಆಕೆ ರತ್ನಗಳ ಗಣಿಯಾಗಿರುವಳು.

– ಕಬೀರರು

# ಗುರುವಂದನಾ ಕಾರ್ಯಕ್ರಮ ಬೆಂಗಳೂರು ದಕ್ಷಿಣ ಜಿಲ್ಲೆ

ಜಗದ್ಗುರುವಾದ ಶ್ರೀಕೃಷ್ಣನಿಗೆ ಗುರುವಾದ ಸಾಂದೀಪನಿ ಮಹರ್ಷಿಗಳ ಹೆಸರಿನಿಂದ ವಿರಾಜಮಾನವಾದ ಹಾಗೂ ನಮಗೆಲ್ಲರಿಗೂ ಮಹಾಗುರುವಾದ ಶ್ರೀ ಕೃ ನರಹರಿರವರ ಕಾರ್ಯಕ್ಷೇತ್ರವಾದ ಸಾಂದೀಪನ ವಿದ್ಯಾಭವನ, ಶ್ರೀರಾಮಪುರದಲ್ಲಿ 31–7–2021 ರಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ದಕ್ಷಿಣ ಜಿಲ್ಲೆಯ 'ಗುರುವಂದನಾ' ಕಾರ್ಯಕ್ರಮವನ್ನು ಕೇಂದ್ರ ಸಂಘದ ನಿರ್ದೇಶನದಂತೆ ಕೋವಿಡ್ ನಿಯಮವನ್ನು ಪಾಲಿಸಿ ಅರ್ಥಪೂರ್ಣವಾಗಿ ಆಚರಿಸಲಾಯಿತು. ಶ್ರೀಮತಿ ಮಾಯಾಪ್ರಭು, ಜಿಲ್ಲಾ ಖಜಾಂಚಿರವರು ಶಾರದೆಯನ್ನು ಸ್ತುತಿಸಿ ಶುಭಾರಂಭಿಸಿದರು. ಗಣ್ಯರು ದೀಪ ಬೆಳಗಿ ಮಹರ್ಷಿ ವೇದವ್ಯಾಸರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಜಿಲ್ಲಾ ಅಧ್ಯಕ್ಷರಾದ ಶ್ರೀ ಸುರೇಂದ್ರರವರು ಸ್ವಾಗತ ಕೋರಿದರು. ಜಿಲ್ಲಾ ಕಾರ್ಯದರ್ಶಿಗಳಾದ ಡಾ|| ವೆಂಕಟರಮಣ ಭಟ್ಟರವರು ನಿರೂಪಣೆ ಮತ್ತು ಪ್ರಾಸ್ತಾವಿಕವಾಗಿ ಮಾತನಾಡುತ್ತ ಕರ್ನಾಟಕ ರಾಜ್ಯ ಮಾಧ್ಯಮಿಕ ಸಂಘದ ಸಾಧನೆಯ ಹಾದಿ ಮತ್ತು ಕಾರ್ಯಕ್ರಮಗಳ ಕಿರುಪರಿಚಯ ಮಾಡಿ, ಗುರು ವಂದನಾ ಕಾರ್ಯಕ್ರಮದ ಉದ್ದೇಶ, ಔಚಿತ್ಯ ಹಾಗೂ ಮಹತ್ವವನ್ನು ವಿವರಿಸಿದರು. ಮುಖ್ಯ ವಕ್ತಾರರಾಗಿ ಶ್ರೀಮತಿ ಜಿ.ಎನ್ ವಾಸುಕಿ, ರಾಜ್ಯ ಮಹಿಳಾ ಪ್ರಮುಖ್ ಮಾತನಾಡಿ ಮಹರ್ಷಿ ವೇದವ್ಯಾಸರ ಲೋಕೋತ್ತರ ಕೊಡುಗೆಗಳನ್ನು ಸ್ಮರಿಸುತ್ತ, ವ್ಯಾಸರ ಜೀವನ ಸಾಧನೆಗಳನ್ನು ಮನಮಟ್ಟುವಂತೆ ವರ್ಣಿಸಿ, ಪ್ರಸ್ತುತ ಸಂದರ್ಭದಲ್ಲಿ ಗುರುವಂದನೆಯ ಅಗತ್ಯತೆ ಮತ್ತು ಶಿಕ್ಷಕರ ಜವಾಬ್ದಾರಿಗಳನ್ನು ತಿಳಿಸಿದರು. ಅಧ್ಯಕ್ಷತೆಯನ್ನು ವಹಿಸಿದ ಶ್ರೀ ವಿದ್ಯಾಸಾಗರ, ಕಾರ್ಯದರ್ಶಿಗಳು, ಶ್ರೀ ಸಾಂದೀಪನ ವಿದ್ಯಾಭವನರವರು ಮಾತನಾಡಿ ಗುರುವಂದನಾ ಪವಿತ್ರ ಕಾರ್ಯಕ್ರಮಕ್ಕೆ ತಮ್ಮ ಸಂಸ್ಥೆಯನ್ನು ಆಯ್ಕೆ ಮಾಡಿಕೊಂಡಿದ್ದಕ್ಕೆ ತುಂಬಾ ಸಂತೋಷಪಟ್ಟು, ಬೇರೆ ಬೇರೆ ಪರಂಪರೆಯ ಗುರುಗಳ ಪರಿಚಯಮಾಡಿಸಿ, ಅವರ ಮಾರ್ಗದರ್ಶನದಂತೆ ನಾವೆಲ್ಲರೂ ನಡೆದರೆ ಪ್ರಪಂಚಕ್ಕೆ ಒಳಿತಾಗುವುದು ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದ ಕೊನೆಯಲ್ಲಿ ಶ್ರೀಮತಿ ಧನಲಕ್ಷ್ಮಿ, ಜಿಲ್ಲಾ ಮಹಿಳಾ ಪ್ರಮುಖರವರು ವಂದನಾರ್ಪಣೆ ಸಲ್ಲಿಸಿದರು.

ವರದಿ : ಶ್ರೀ ವೆಂಕಟರಮಣ ಭಟ್

# ಗುರುವಂದನಾ ಕಾರ್ಯಕ್ರಮ – ಮೈಸೂರು

ಕರೋನ ಭೀತಿಯ ನಡುವೆ ಪ್ರತಿ ವರ್ಷದಂತೆ "ಗುರುವಂದನ "ಕಾರ್ಯಕ್ರಮವನ್ನು ಮಾಡಲು 11/08/2021ರಂದು ಸಂಘದ ಪದಾಧಿಕಾರಿಗಳು ಬೈಠಕ್ ಮಾಡಿ 13/08/2021ರಂದು ಕಾರ್ಯಕ್ರಮವನ್ನು ಮಾಡಲು ತೀರ್ಮಾನಿಸಿ ಅದರಂತೆ ಒಂದು ದಿನದಲ್ಲಿ ಫೋನ್ ಕರೆಯ ಮೂಲಕ 65 ಸಂಖ್ಯೆಯ ಉಪನ್ಯಾಸಕರು, ಶಿಕ್ಷಕರು, ಪ್ರಾಂಶುಪಾಲರನ್ನು ಸೇರಿಸಿದ್ದು ತುಂಬಾ ಸಂತೋಷದ ಸಂಗತಿ. ವಿಶೇಷವಾಗಿ ಜವಾಬ್ದಾರಿಯನ್ನು ನಿರ್ವಹಿಸಿದ ಸಂಘದ ಪ್ರಧಾನಕಾರ್ಯದರ್ಶಿ ಶ್ರೀ ಉದಯರವಿಪ್ರಕಾಶ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯವರ ಅಪೇಕ್ಷೆಗೂ ಮೀರಿದ ಸಂಖ್ಯೆ ಸೇರಿಸುವಲ್ಲಿ ಶ್ರಮವಹಿಸಿದ್ದು ಅವರ ಕಾರ್ಯವೈಖರಿಗೆ ಸಾಕ್ಷಿಯಾಗಿದೆ. ವೇದಿಕೆಯಲ್ಲಿ ಶ್ರೀ ಶಿವಾನಂದ ಸಿಂಧನಕೇರಾ ರಾ.ಪ್ರ ಕಾರ್ಯದರ್ಶಿಗಳು ABRSM, ದೆಹಲಿ, ಮುಖ್ಯ ಅತಿಥಿಗಳಾಗಿ ಶ್ರೀ ನಾಗಮಲ್ಲೇಶ್, ಉಪನಿರ್ದೇಶಕರು ಪ.ಪೂ ಶಿ ಇಲಾಖೆ, ಚಾಮರಾಜನಗರ. ಶ್ರೀ ಮಂಜುನಾಥ, ಗೋಪಾಲ ಶಿಕ್ಷಣಸಂಸ್ಥೆ, ಮೈಸೂರು, ಶ್ರೀ ಜಯದೇವರಾಜೇ ಅರಸ್, ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಮೈಸೂರು ಉಪಸ್ಥಿತರಿದ್ದು ಸಂಘಟನೆಯ ಎಲ್ಲ ಪದಾಧಿಕಾರಿಗಳ ಸಂಯೋಜನೆ, ಸಹಮತದಂತೆ ಕಾರ್ಯಕ್ರಮವು ಯಶಸ್ವಿಯಾಯಿತು.

NO ಎಂಬ ಉತ್ತರ ಬಂದಾಗ ನೆನಪಿಸಿಕೊಳ್ಳಿ, "Next Opportunity"ಎಂದು. – ಅಬ್ದುಲ್ ಕಲಾಂ

# ಗುರುವಂದನಾ ಕಾರ್ಯಕ್ರಮ ಬೆಂಗಳೂರು ಉತ್ತರ

29-07-2021ರಂದು ಸಂಘದ ಕೇಂದ್ರ ಕಾರ್ಯಾಲಯ ಯಾದವಸ್ಮೃತಿಯಲ್ಲಿ ಗುರುವಂದನಾ ಕಾರ್ಯಕ್ರಮ ಮತ್ತು 2020-2021 ನೇ ಸಾಲಿನ SSLC ಮಕ್ಕಳಿಗೆ ಸಂಘದ ವತಿಯಿಂದ ಆಯೋಜಿಸಿದ ಪೋನ್-ಇನ್ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದ ಸಂಪನ್ಮೂಲ ಶಿಕ್ಷಕರಿಗೆ ಗೌರವ ಸಮರ್ಪಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಜಿಲ್ಲಾ ಖಜಾಂಚಿಗಳಾದ ಶ್ರೀ ಹರಿದಾಸ್‌ರವರ ಪ್ರಾರ್ಥನೆಯೊಂದಿಗೆ ಪ್ರಾರಂಭಿಸಲಾಯಿತು. ಬೆಂಗಳೂರು ಉತ್ತರ ಜಿಲ್ಲೆಯ ಕಾರ್ಯದರ್ಶಿಗಳಾದ ಶ್ರೀ ನಾರಾಯಣ ಭಟ್ಟರವರು ಗಣ್ಯರ ಪರಿಚಯ ಮಾಡಿ ಸ್ವಾಗತಿಸಿದರು. ವೇದವ್ಯಾಸರು ಮತ್ತು ಭಾರತ ಮಾತೆಯ ಭಾವಚಿತ್ರಕ್ಕೆ ಗಣ್ಯರು ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಪ್ರಾಸ್ತಾವಿಕ ನುಡಿಯಲ್ಲಿ ಸಂಘ ಬೆಳೆದು ಬಂದ ಹಾದಿ, ಸಂಘದ ಕಾರ್ಯಕ್ರಮಗಳು ಮತ್ತು ಧ್ಯೇಯೋದ್ದೇಶಗಳನ್ನು ರಾಜ್ಯ ಖಜಾಂಚಿಗಳಾದ ಶ್ರೀ ಜೆ.ಎಂ.ಜೋಷಿಯವರು ವಿವರಿಸಿದರು.

ಮುಖ್ಯ ವಕ್ತಾರರಾಗಿ ಸಂಸ್ಕೃತ ಭಾರತಿ, ಬೆಂಗಳೂರಿನ ಅಖಿಲ ಭಾರತ ಕಾರ್ಯದರ್ಶಿಗಳಾದ ಶ್ರೀಯುತ ಸತ್ಯನಾರಾಯಣರವರು ಉತ್ತಮ ಸಮಾಜದ ನಿರ್ಮಾಣದಲ್ಲಿ ಶಿಕ್ಷಕರ ಜವಾಬ್ದಾರಿಯನ್ನು ತಿಳಿಸುತ್ತಾ, ಭಗವದ್ಗೀತೆಯ 12 ನೇ ಅಧ್ಯಾಯದಲ್ಲಿ ಬರುವ ದ್ವೇಷ, ಅಸೂಯೆ ರಹಿತ ಸಮಾಜದಲ್ಲಿ ಸಾಮರಸ್ಯದ ಬದುಕನ್ನು ನಡೆಸುವ ಎಲ್ಲರಲ್ಲೂ ದಯೆ, ಪ್ರೀತಿ, ವಿಶ್ವಾಸವನ್ನು ಹೊಂದಿ ಜೀವಿಸುವ ಬಗೆಯನ್ನು ಶಿಕ್ಷಕರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಬೇಕೆಂದು ತಿಳಿಸಿದರು.

ಬೆಂಗಳೂರು ಉತ್ತರ ಜಿಲ್ಲೆಯ ಅಧ್ಯಕ್ಷರಾದ ಶ್ರೀ ಗಂಗಪ್ಪರವರು ಪೋನ್ ಇನ್ ಕಾರ್ಯಕ್ರಮವನ್ನು ಆಯೋಜಿಸಿದ ಬಗ್ಗೆ ತಿಳಿಸಿದರು. ಪೋನ್ ಇನ್ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟ ಸಂಪನ್ಮೂಲ ಶಿಕ್ಷಕರನ್ನು ವೇದಿಕೆಯಲ್ಲಿ ಗಣ್ಯರು ಸನ್ಮಾನಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಕಾರ್ಯಾಲಯ ಪ್ರಮುಖರು, ಹಿರಿಯ ಮಾರ್ಗದರ್ಶಕರು ಆದ ಶ್ರೀಯುತ ಜಿ.ಎಸ್.ಕೃಷ್ಣಮೂರ್ತಿಯವರು ಗುರುವಂದನಾ ಕಾರ್ಯಕ್ರಮದ ಮಹತ್ವದ ಬಗ್ಗೆ ತಿಳಿಸಿದರು. ಬೆಂಗಳೂರು ವಿಭಾಗ ಪ್ರಮುಖರಾದ ಶ್ರೀ ಮಲ್ಲಿಕಾರ್ಜುನ. ಜಿ.ಕೂಡಗಿಯವರು ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದ ಎಲ್ಲರಿಗೂ ವಂದಿಸಿದರು. ಬೆಂಗಳೂರು ಉತ್ತರ ವಲಯ-3ರ ಕಾರ್ಯದರ್ಶಿ ಶ್ರೀ ಎಂ.ವಿ.ಗಂಗಾಧರರವರು ಕಾರ್ಯಕ್ರಮವನ್ನು ನಿರೂಪಿಸಿದರು.

ವರದಿ : ಎಂ.ವಿ.ಗಂಗಾಧರ

# ಗುರುವಂದನಾ ಕಾರ್ಯಕ್ರಮ - ಬಳ್ಳಾರಿ

ಗುರುಪೌರ್ಣಿಮೆ ಕಾರ್ಯಕ್ರಮವನ್ನು ನಗರದ ಬಿಎಂಎಸ್ ಕಾರ್ಯಾಲಯದಲ್ಲಿ ಭಾರತೀಯ ಶಿಕ್ಷಣ ಮಂಡಲಿ, ಬಳ್ಳಾರಿ, ಕರ್ನಾಟಕ ಉತ್ತರ ಪ್ರಾಂತ ಹಾಗೂ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕರ ಸಂಘದ ಸಹಯೋಗದಲ್ಲಿ ಕಾರ್ಯಕ್ರಮವನ್ನು ಆಚರಿಸಲಾಯಿತು.

ಸಭೆಯಲ್ಲಿ ಮಾಧ್ಯಮಿಕ ಶಿಕ್ಷಕರ ಸಂಘದ ರಾಜ್ಯ ಕಾರ್ಯದರ್ಶಿಯಾದ ಎ ಗುಂಡಾಚಾರ್, ಬಳ್ಳಾರಿ ಜಿಲ್ಲಾ ಮಾಧ್ಯಮಿಕ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷರಾದ ಯು ರಮೇಶ್, ಕಾರ್ಯದರ್ಶಿ ನರಸನಗೌಡ, ಸದಸ್ಯರು ಹಾಗೂ ಕುಮಾರಸ್ವಾಮಿ, ಸದಸ್ಯರು ಹಾಗೂ ಇನ್ನೂ ಮುಂತಾದವರು ಭಾಗವಹಿಸಿದ್ದರು.

# ನನ್ನ ಶಾಲೆ ನನ್ನ ತೀರ್ಥಕ್ಷೇತ್ರ

ಶಿಕ್ಷಕರು ಸೇವಾ ಮನೋಭಾವದಿಂದ ಮಾಡುತ್ತಿರುವ ಕಾರ್ಯ ಶ್ಲಾಘನೀಯ ಎಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕರ ಸಂಘದ ರಾಜ್ಯಾಧ್ಯಕ್ಷರಾದ ಶ್ರೀಯುತ ಸಂದೀಪ್ ಬೂದಿಹಾಳ್ ತಿಳಿಸಿದರು.

ಅವರು ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಸೋರೆಕಾಯಿದೊಡ್ಡಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕರ ಸಂಘ ಬೆಂಗಳೂರು ಹಾಗೂ ಕರ್ನಾಟಕ ರಾಜ್ಯ ಪ್ರಾಥಮಿಕ ಶಿಕ್ಷಕರ ಸಂಘ, ಕನಕಪುರ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ " ನನ್ನ ಶಾಲೆ, ನನ್ನ ತೀರ್ಥಕ್ಷೇತ್ರ " ಎಂಬ ವಿನೂತನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಸ್ವಾತಂತ್ರ್ಯ ಹೋರಾಟಗಾರರಾದ ಪೂಜ್ಯ ಶ್ರೀ ಕರಿಯಪ್ಪನವರ ಹುಟ್ಟೂರಾದ ಸೋರೇಕಾಯಿದೊಡ್ಡಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಈ ವಿನೂತನ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಸ್ವಾತಂತ್ರ್ಯವನ್ನು ಗಳಿಸಿ 75 ವರ್ಷ ತುಂಬಿದ ಹಿನ್ನೆಲೆಯಲ್ಲಿ ಅವರ ಹುಟ್ಟೂರು ಹಾಗೂ ಅವರು ಓದಿದ ಶಾಲೆಯನ್ನು ಆಯ್ಕೆ ಮಾಡಿಕೊಂಡು ಸುಮಾರು 60 ರಿಂದ 70 ಮಂದಿ ಶಿಕ್ಷಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಶಾಲೆಗೆ ಸುಣ್ಣ-ಬಣ್ಣ, ಶಾಲೆಯ ಗೋಡೆ ಹಾಗೂ ಕಂಬಗಳ ಮೇಲೆ ಬರಹಗಳನ್ನು ವೈವಿಧ್ಯಮಯವಾಗಿ ಬಿಡಿಸುವುದರ ಮೂಲಕ ಶಾಲೆಯನ್ನು ಶೃಂಗರಿಸಿ ಕಣ್ಮನ ತುಂಬಿಕೊಂಡರು. ಗಿಡಗಂಟೆಗಳನ್ನು ಕತ್ತರಿಸಿ, ಶಾಲೆಯ ಮೈದಾನವನ್ನು ಸ್ವಚ್ಛಗೊಳಿಸಿ, ಗಿಡಗಳನ್ನು ನೆಡುವುದರ ಮೂಲಕ ಶಾಲೆಗೆ ಇನ್ನಷ್ಟು ಮೆರಗನ್ನು ತಂದುಕೊಡುವಲ್ಲಿ ಶಿಕ್ಷಕರ ಪಾತ್ರ ಅಪಾರವಾಗಿತ್ತು.

ಇಡೀ ರಾಷ್ಟ್ರದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಹೆಸರಿನಲ್ಲಿ ಅವರ ಹುಟ್ಟೂರು, ಅವರು ಓದಿದ ಶಾಲೆಯನ್ನು ಆಯ್ಕೆ ಮಾಡಿಕೊಂಡು ಕಾರ್ಯಕ್ರಮ ಆಯೋಜಿಸಿರುವುದು ಶ್ಲಾಘನೀಯ ಎಂದು ಕರಿಯಪ್ಪನವರ ಮೊಮ್ಮಗ ಪುಟ್ಟಸ್ವಾಮಿ ತಿಳಿಸಿದರು. ಕನಕಪುರದ ಸೋರೆಕಾಯಿದೊಡ್ಡಿಯಲ್ಲಿ ಕರಿಯಪ್ಪನವರ ಸ್ಮರಣಾರ್ಥ ಆಯೋಜಿಸಿರುವುದು ಶಿಕ್ಷಕರು ಕರಿಯಪ್ಪನವರಿಗೆ ನೀಡುತ್ತಿರುವ ಗೌರವ ಎಂದರು.

ಶಿಕ್ಷಕರು ಮತ್ತು ದಾನಿಗಳಿಂದ ಸಂಗ್ರಹಿಸಿದ ಸುಮಾರು ಐವತ್ತು ಸಾವಿರ ರೂ.ಗಳನ್ನು ಖರ್ಚು ಮಾಡಿ ಶಾಲೆಯನ್ನು ಸಿಂಗರಿಸಿದ ರೀತಿ ನನ್ನ ಶಾಲೆ ನನ್ನ ತೀರ್ಥಕ್ಷೇತ್ರ ಎಂಬ ಕಾರ್ಯಕ್ರಮಕ್ಕೆ ಸಂದ ಗೌರವವಾಗಿದೆ. ಈ ಸಂದರ್ಭದಲ್ಲಿ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಯುತ ಚಿದಾನಂದ ಪಾಟೀಲ, ಎಬಿಆರ್‌ಎಸ್‌ಎಮ್‌ನ ಮಹಿಳಾ ವಿಭಾಗದ ಸಹಕಾರ್ಯದರ್ಶಿಗಳಾದ ಶ್ರೀಮತಿ ಮಮತಾ ಡಿ.ಕೆ, ಸಂಘದ ಉಪಾಧ್ಯಕ್ಷರಾದ ಬಿ.ಹೆಚ್. ವರದರಾಜು ಸರ್, ಕಾರ್ಯದರ್ಶಿಗಳಾದ ವಿಜಯಲಕ್ಷ್ಮಿ ಬಿ, ಸಂಘದ ಸಹ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಯುತ ಗಂಗಾಧರಾಚಾರಿಯವರು, ರಾಮನಗರ ಜಿಲ್ಲೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಯುತ ಚನ್ನೇಗೌಡ ಬಿ, ಕಾರ್ಯಕ್ರಮದ ಸಂಯೋಜಕರಾದ ಪುಟ್ಟಸ್ವಾಮಿ ಮತ್ತು ಪ್ರಸನ್ನಕುಮಾರ್, ಗ್ರಾ.ಪಂ. ಉಪಾಧ್ಯಕ್ಷರಾದ ಮುತ್ತುರಾಜ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷರಾದ ರಮೇಶ್, ತಾಲ್ಲೂಕು ಅಧ್ಯಕ್ಷರಾದ ಪ್ರಭಾಕರ್ ಹಾಗೂ ಪದಾಧಿಕಾರಿಗಳು ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

**ಶಿಕ್ಷಣವೆಂದರೆ ಮೊದಲೇ ಮನುಷ್ಯನಲ್ಲಿ ಇರುವ ಪರಿಪೂರ್ಣತೆಯನ್ನು ಪ್ರಕಾಶಪಡಿಸುವುದು. – ಸ್ವಾಮಿ ವಿವೇಕಾನಂದ**

# ನೇಮಕಾತಿಯಲ್ಲಿ ಮೀಸಲಾತಿ ವಿನಾಯಿತಿ ಕುರಿತು ಸಭೆ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ವತಿಯಿಂದ ಬೆಳಗಾವಿ ವಿಭಾಗ ಮತ್ತು ಧಾರವಾಡ ವಿಭಾಗದ ಶಿಕ್ಷಣ ಸಂಸ್ಥೆಗಳಲ್ಲಿ ಭಾಷಿಕ ಅಲ್ಪಸಂಖ್ಯಾತ ಶಾಲೆಗಳಲ್ಲಿ ನೇಮಕಾತಿಯಲ್ಲಿ ಮೀಸಲಾತಿ ವಿನಾಯಿತಿ ಕುರಿತು ಸರ್ಕಾರ ಆದೇಶ ಮಾಡಿರುವುದನ್ನು ಅನುಷ್ಠಾನ ಮಾಡಿರುವ ಕುರಿತು, ಶಿಕ್ಷಕರ ಬಡ್ತಿ ಸಮಸ್ಯೆ, ವರ್ಗಾವಣೆ, ಖಾಲಿ ಹುದ್ದೆ ಭರ್ತಿ ಮಾಡುವುದು, ಶಿಕ್ಷಕರು ಎದುರಿಸುತ್ತಿರುವ ಅನೇಕ ಸವಾಲುಗಳು ಮತ್ತು ಪರಿಹಾರ ಕುರಿತು ಆಯುಕ್ತರಾದ ಮೇಜರ್ ಸಿದ್ದಲಿಂಗಯ್ಯನವರ ಜೊತೆ ಆಯುಕ್ತರ ಕಛೇರಿಯಲ್ಲಿ ಸಭೆ ನಡೆಯಿತು. ಅನೇಕ ಸಮಸ್ಯೆಗಳಿಗೆ ಸಭೆಯಲ್ಲಿ ಪರಿಹಾರದ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀಮತಿ ಮಮತಾ ನಾಯಕ, ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಾಧ್ಯಕ್ಷರು ಮತ್ತು ವಿಧಾನ ಪರಿಷತ್ ಸದಸ್ಯರಾದ ಅರುಣ ಶಹಾಪೂರ, ಎಬಿಆರ್‌ಎಸ್‌ಎಮ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಶಿವಾನಂದ ಸಿಂಧನಕೇರಾ, ಅಧ್ಯಕ್ಷರಾದ ಸಂದೀಪ ಬೂದಿಹಾಳ, ರಾಜ್ಯಕಾರ್ಯದರ್ಶಿ ಆರ್.ಪಿ.ಒಂಟಗೋಡಿ, ಅಶೋಕ ನಾಯಕ, ಉಮೇಶ ಕುಲಕರ್ಣಿ, ಎಸ್.ಎಸ್.ಬೆಳಗಾಂವಕರ, ಬಿ.ಜಿ.ಜಾಧವ, ಶ್ರೀಮತಿ ಎಸ್.ಎ.ಚಾಟೆ, ಎಮ್.ಬಿ.ಪೂಜಾರ ಹಾಗೂ ವಿವಿಧ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿ ಸದಸ್ಯರು, ಶಿಕ್ಷಕರು ಸಭೆಯಲ್ಲಿ ಭಾಗವಹಿಸಿದ್ದರು.

➢ ಪುಟ 4 ರಿಂದ.....

ಕಾರ್ಯ ನಿರ್ವಹಿಸುವ ಅವಕಾಶ ದೊರೆಯಿತು. ಈ ಟ್ರಸ್ಟ್ ಮೂಲಕ ಸಮಾಜದ ನೆರವಿನೊಂದಿಗೆ ಮಹಿಳೆಯರನ್ನು ಸ್ವಾವಲಂಬಿ ಮಾಡಲು ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಿದರು. ಈ ಎಲ್ಲಾ ಕಾರ್ಯಗಳನ್ನು ಗಮನಿಸಿಯೇ ಕಮಲಾದೇವಿ ಚಟ್ಟೋಪಾಧ್ಯಾಯರವರು " ನನ್ನ ಜೀವನದಲ್ಲಿ ಇದೊಂದು ಮುಖ್ಯ ತಿರುವು. ಉಮಾಬಾಯಿಯವರ ಜೊತೆ ನಾನು ಸ್ವಯಂಸೇವಕಿಯಾಗಿ ಸೇರಿಕೊಂಡೆ ಮತ್ತು ಜೀವನದ ಕೊನೆಯವರೆಗೂ ಅವರ ಶಿಬಿರದ ಅನುಯಾಯಿಯಾಗಿ ಮುಂದುವರೆದೆ." ಎಂದು ಹೇಳಿದರು.

ಅನೇಕ ಹೋರಾಟಗಳ ಪ್ರತಿಫಲದಿಂದ ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ರಾಜಕೀಯ ಅನೇಕ ಅವಕಾಶಗಳು ಇವರಿಗಾಗಿ ರಾಷ್ಟ್ರ ಮತ್ತು ರಾಜ್ಯ ಹಂತದಲ್ಲಿ ಬಂದವು. ಆದರೆ ಉಮಾಬಾಯಿಯವರು ಅವುಗಳನ್ನು ನಯವಾಗಿ ತಿರಸ್ಕರಿಸಿದರಲ್ಲದೇ ಸ್ವಾತಂತ್ರ್ಯ ಹೋರಾಟಗಾರರ ಪಿಂಚಣಿ ಮತ್ತು ತಾಮ್ರಪತ್ರಗಳ ಪ್ರಶಸ್ತಿಗಳನ್ನು ಸ್ವೀಕರಿಸಲು ನಿರಾಕರಿಸಿದರು. 1992ರಲ್ಲಿ ಹುಬ್ಬಳ್ಳಿಯಲ್ಲಿ ನಿಧನರಾದ ಉಮಾಬಾಯಿಯವರ ಬಗ್ಗೆ ಡಾ ॥ ಎನ್.ಎಸ್. ಹರ್ಡೀಕರ್ ಅವರು ಹೀಗೆ "ನನಗೆ ತಿಳಿದ ಮಟ್ಟಿಗೆ ಕರ್ನಾಟಕದಲ್ಲಿ ಉಮಾಬಾಯಿ ರಾಜಕೀಯ, ಸಾಮಾಜಿಕ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಮಾಡಿದಷ್ಟು ಚಟುವಟಿಕೆಯನ್ನು ಯಾವ ಮಹಿಳೆಯು ಮಾಡಿಲ್ಲ. ಆಕೆ ಯಾವುದೇ ಪ್ರತಿಫಲವನ್ನು ನಿರೀಕ್ಷಿಸದೇ ಕಾರ್ಯದಲ್ಲಿ ತೊಡಗಿದ್ದಳು." ಎಂದು ಹೇಳಿದರು.

ಹೀಗಿರುವಾಗ ಸ್ವಾತಂತ್ರ್ಯ ಗಳಿಸಿ 75 ವರ್ಷ ಗತಿಸಿರುವ ಈ ಸಂದರ್ಭದಲ್ಲಿ ಉಮಾಬಾಯಿ ಕುಂದಾಪುರ ಅವರನ್ನು ಸ್ಮರಿಸುವುದು ಸೂಕ್ತವಲ್ಲವೇ? ಅವರ ಆದರ್ಶಗಳು ನಮಗೆ ಪ್ರೇರಣೆ ಅಲ್ಲವೇ? ●

# ಶಿಕ್ಷಣ ಸಚಿವರಿಗೆ ಮನವಿ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಯಾದಗಿರಿ ಜಿಲ್ಲಾ ಘಟಕದ ವತಿಯಿಂದ ಶಹಾಪುರ ನಗರಕ್ಕೆ ನೂತನ ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಹಾಗೂ ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವರಾದ ಸನ್ಮಾನ್ಯ ಶ್ರೀ ಬಿ ಸಿ ನಾಗೇಶ್ ಜಿ ರವರಿಗೆ ಆಗಮಿಸಿದ್ದರಿಂದ ಅವರನ್ನು ಸನ್ಮಾನಿಸಲಾಯಿತು ಹಾಗೂ ಶಿಕ್ಷಕರ ವಿವಿಧ ಬೇಡಿಕೆಗಳ ಈಡೇರಿಕೆಗೆ ಮನವಿ ಸಲ್ಲಿಸಲಾಯಿತು. ಸಂಘದ ಬೇಡಿಕೆಗಳಿಗೆ ಧನಾತ್ಮಕವಾಗಿ ಸ್ಪಂದಿಸಿ, ಸಂಘದ ಕಾರ್ಯಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ KRMSS ನ ಜಿಲ್ಲಾ ಗೌರವಾಧ್ಯಕ್ಷರಾದ ಶ್ರೀಯುತ ಸುಧಾಕರ್ ಗುಡಿ , ಜಿಲ್ಲಾಧ್ಯಕ್ಷರಾದ ಶ್ರೀ ಅನಿಲ್ ಕುಮಾರ್ ಬಿರಾದರ್, ಜಿಲ್ಲಾ ಸಂಘಟನಾ ಕಾರ್ಯದರ್ಶಿಯಾದ ಶ್ರೀ ಬಿ ಜಿ ಪಾಟೀಲ್, ಸ್ಕೌಟ್ ಗೈಡ್‌ನ ಜಿಲ್ಲಾ ಪ್ರಮುಖರಾದ ಶ್ರೀ ಬಸವರಾಜ ಗೋಗಿ, ಶ್ರೀ ರಂಗಣ್ಣ, ಶ್ರೀ ಈರಣ್ಣ ಕೊಳ್ಳಿ ಸೇರಿದಂತೆ ಇನ್ನಿತರ ಶಿಕ್ಷಕರು ಭಾಗವಹಿಸಿದ್ದರು.

# ಶಿಕ್ಷಕನ ಮಹತ್ತ್ವ

ಒಮ್ಮೆ ಡಾ॥ ಕಲಾಮ್ ತನ್ನ ಸಹೋದ್ಯೋಗಿ ಸೃಜನ್‌ಪಾಲ್ ಸಿಂಹರನ್ನು ಕೇಳಿದರು– 'ನೀನೊಬ್ಬ ಶಿಕ್ಷಿತ ಯುವಕ. ಈ ಸಮಾಜ ನಿನ್ನನ್ನು ಯಾವ ರೀತಿ ನೆನಪಿಟ್ಟುಕೊಳ್ಳಬೇಕೆಂದು ನೀನು ಬಯಸುತ್ತಿ?'

ಇದನ್ನು ಕೇಳಿ ಸೃಜನ್‌ಪಾಲರು ಕ್ಷಣಕಾಲ ತಬ್ಬಿಬ್ಬಾದರು. ' ಈವರೆಗೆ ತಾನು ಜೀವನದಲ್ಲಿ ಹೇಳಿಕೊಳ್ಳುವಂತಹ ಯಾವುದೇ ಮಹತ್ತ್ವದ ಸಾಧನೆಯನ್ನು ಮಾಡಿಲ್ಲ. ಈ ಪ್ರಶ್ನೆಗೆ ಹೇಗೆ ಉತ್ತರಿಸಲಿ' ಎಂದು ಯೋಚಿಸತೊಡಗಿದರು. ಸೃಜನ್‌ಪಾಲರ ಸಂದಿಗ್ಧತೆಯನ್ನು ಗಮನಿಸಿದ ಡಾ॥ ಕಲಾಮ್ 'ಇಂತಹ ಸರಳ ಪ್ರಶ್ನೆಗೆ ಉತ್ತರ ಕೊಡಲು ಇಷ್ಟೊಂದು ಸಮಯ ಬೇಕೆ? ಈವರೆಗೆ ಮಾಡಿರುವ ಉತ್ತಮ ಕೆಲಸ ಅಥವಾ ಉಲ್ಲೇಖನೀಯ ಸಾಧನೆ ಹೇಳಿದರಾಯಿತು.

ಸೃಜನ್‌ಪಾಲರೆಂದರು– 'ನಾನು ಈವರೆಗೆ ಅಂತಹ ವಿಶೇಷ ಸಾಧನೆಯನ್ನೇನೂ ಮಾಡಿಲ್ಲ. ಇನ್ನು ಮುಂದೆ ಅಂತಹ ಯಾವುದಾದರೂ ಉತ್ತಮ ಕೆಲಸ ಮಾಡಬೇಕಾಗಿದೆ. ವಾಸ್ತವ ಹೀಗಿರಬೇಕಾದರೆ, ನೀನು ಪ್ರಶ್ನೆಗೆ ಹೇಗೆ ಉತ್ತರಿಸಲಿ? ಡಾ॥ ಕಲಾಮ್ ಮುಂದುರಿಸಿದರು 'ನೀನು ಯಾವುದರಿಂದ ಗುರುತಿಸಲ್ಪಡಬೇಕೆಂದಿರುವಿ– ನಿನ್ನ ಕೆಲಸದಿಂದಲೋ ಅಥವಾ ಸಾಧನೆಯಿಂದಲೋ? ಅದನ್ನಾದರೂ ಹೇಳಬಹುದೇ?'

ಸೃಜನ್‌ಪಾಲರೆಂದರು 'ಎರಡರಿಂದಲೂ ! ಸರ್, ನೀವೊಬ್ಬ ವಿಜ್ಞಾನಿ, ಲೇಖಕ, ಭಾರತದ ಮಿಸ್ಸೈಲ್ ಮ್ಯಾನ್ ( ಕ್ಷಿಪಣಿ ಪುರುಷ) ಮತ್ತು ರಾಷ್ಟ್ರಪತಿಯೂ ಹೌದು. ಇವೆಲ್ಲದರಲ್ಲಿ ನಿಮ್ಮನ್ನು ಜನರು ಯಾವ ರೂಪದಲ್ಲಿ ನೆನಪಿಟ್ಟುಕೊಳ್ಳಬೇಕೆಂದು ನೀವು ಬಯಸುತ್ತೀರಿ?'

ಡಾ॥ ಕಲಾಮ್ ಹೇಳಿದರು 'ನಾನು ಒಬ್ಬ ಶಿಕ್ಷಕನಾಗಿ ಗುರುತಿಸಲ್ಪಡಲು ಇಚ್ಛಿಸುತ್ತೇನೆ. ಶಿಲ್ಪಿ ಕಲ್ಲನ್ನು ಕೆತ್ತಿ ಸುಂದರ ಮೂರ್ತಿಯನ್ನು ನಿರ್ಮಿಸುವಂತೆಯೇ ಶಿಕ್ಷಕನು ತನ್ನ ವಿದ್ಯಾರ್ಥಿಗಳನ್ನು ತಿದ್ದಿ ತೀಡಿ ಅವರು ಜೀವನದಲ್ಲಿ ಯಶಸ್ವಿಯಾಗುವಂತೆ ತಯಾರು ಮಾಡುತ್ತಾನೆ. ಅದಕ್ಕಾಗಿಯೇ ಜನರು ನನ್ನನ್ನು ಶಿಕ್ಷಕನಾಗಿ ಗುರುತಿಸುವಂತಾಗಲಿ ಎಂದೇ ನನ್ನ ಆಶಯ'

ಈ ಮಾತುಗಳನ್ನು ಕೇಳಿ ಸೃಜನ್‌ಪಾಲರು ಡಾ॥ ಕಲಾಮ್‌ರಿಗೆ ತಲೆಬಾಗಿದರು. 'ಸರ್, ನೀವೀಗ ನನ್ನ ಶಿಕ್ಷಕರೂ ಹೌದು. ನಿಮ್ಮ ಈ ಮಾತುಗಳನ್ನು ಸದಾ ನೆನಪಿನಲ್ಲಿಟ್ಟಿರುತ್ತೇನೆ' ಎಂದರು. ●

# ವಿದ್ಯಾರ್ಥಿ ಜ್ಞಾನ ಮಿತ್ರ

# ಭಾರತ ಪರಿಚಯ


**ಜೆ. ಎಂ. ಜೋಶಿ**
**ರಾಜ್ಯ ಕೋಶಾಧ್ಯಕ್ಷರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**




ನಮ್ಮ ಭಾರತ ದೇಶ ಸ್ವತಂತ್ರ ಪಡೆದ 75 ನೇ ವರ್ಷದ ಸುಮಧುರ ಸಂದರ್ಭದಲ್ಲಿ ಸ್ವತಂತ್ರ ಸಂಗ್ರಾಮದಲ್ಲಿ ಭಾಗವಹಿಸಿದ ಸೇನಾನಿಗಳನ್ನು ನೆನಪಿಸಿಕೊಳ್ಳುವ ದಿನವೇ ಆಗಸ್ಟ್ 15.

ನಮ್ಮ ಭಾರತ ದೇಶ ಸಾಂಸ್ಕೃತಿಕ ಪ್ರಯೋಗ ಶಾಲೆಯಿದ್ದಂತೆ. ಇಲ್ಲಿನ ಬಹುಮುಖ್ಯ ಪ್ರಭಾವಶಾಲಿ ಮಂತ್ರವೆಂದರೆ 'ಸಮನ್ವಯ' ಎಂಬುದು. ಇದರಿಂದಾಗಿಯೇ ನಮ್ಮ ಸಂಸ್ಕೃತಿಯ ಸುಂದರ, ಪ್ರೀತಿಯುಕ್ತ ರೂಪ ವಿಕಾಸವಾಗಿದೆ. ಈ ಪವಿತ್ರ ಸಂಸ್ಕೃತಿಯ ಭಾವಮಯ ಗಂಗಾಜಲವು ಇಲ್ಲಿನ ಎಲ್ಲ ಬಗೆಯ ಭೇದಗಳನ್ನು ತೊಳೆದು ಶುದ್ಧ ಏಕರಾಷ್ಟ್ರವನ್ನು ನಿರ್ಮಿಸಿದೆ.

ನಮ್ಮ ಇಲ್ಲಿನ ಶ್ರೇಷ್ಠ ರಾಷ್ಟ್ರಭಕ್ತರು ಬೆಳೆಸಿರುವ ನಮ್ಮ ಜನತೆಯ ಎಲ್ಲ ಸ್ತರಗಳಲ್ಲಿ ಹಾಸುಹೊಕ್ಕಾಗಿರುವ ನಮ್ಮ ನಾಡಿನ ಮಾತೃಸ್ವರೂಪದ, ಏಕಾತ್ಮತೆಯ ದಿವ್ಯವಾದ ಜೀವಂತ ಪ್ರಜ್ಞೆ ಇಂತಹುದು. ನಮ್ಮ ಭರತ ಭೂಮಿ ಕೇವಲ ಕಲ್ಲು ಮಣ್ಣಿನ ಆಗರವಲ್ಲ. ಹಾಗೋ ಹೀಗೋ ಬದುಕಿದವರ ಭೂಮಿ ಇದಲ್ಲ. ಭಾರತವು ವಾತ್ಸಲ್ಯದ ಸುಖವನ್ನು ನೀಡಿ ಅಮೃತವನ್ನು ಉಣಿಸಿದ ಮಾತೃಭೂಮಿ. ಸ್ವಾಭಿಮಾನದ ಸಂರಕ್ಷಣೆ ನೀಡಿ ಸಲಹುತ್ತಿರುವ ಪಿತೃಭೂಮಿ. ಸಂಪೂರ್ಣ ಸಾರ್ಥಕತೆಯನ್ನು ಕಾಣುವ ಮೋಕ್ಷಕ್ಕೆ ದಾರಿಯನ್ನು ತೋರುವ ಗುರು ಸ್ವರೂಪಿ. ವಿಶ್ವದ ಉಳಿದೆಲ್ಲ ಕಡೆ ಕತ್ತಲು ಕವಿದಿರುವಾಗಲೆಲ್ಲ ಜ್ಞಾನದ ಬೆಳಕನ್ನು ನೀಡಿದ ಜಗದ್ಗುರು ಭಾರತ.

ನಮ್ಮ ಭಾರತದ ಹಿರಿಮೆ- ಗರಿಮೆಯನ್ನು ಕುರಿತು ನಾವು ಅಧ್ಯಯನ ಮಾಡಿ, ಬೇರೆಯವರಿಗೂ ಕೂಡ ಇದನ್ನು ತಿಳಿಸುತ್ತಾ ಸಾರ್ಥಕತೆಯನ್ನು ಬೆಳೆಸಿಕೊಂಡರೆ ನಮ್ಮ ಗುರು- ಹಿರಿಯರಿಗೆ ನೀಡುವ ಅಲ್ಪ ಕಾಣಿಕೆಯಾದರೂ ಆದೀತು.

**ಈ ಪ್ರಶ್ನೆಗಳಿಗೆ ಉತ್ತರಗಳನ್ನು ಓದುಗರು kssta55@gmail.com ಮೂಲಕ ಕಳುಹಿಸುವುದು. ಸರಿಯಾದ ಉತ್ತರವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.**

## ಒಂದಿಷ್ಟು ಇತಿಹಾಸ

1. "ಸ್ವರಾಜ್ಯವೇ ನನ್ನ ಜನ್ಮಸಿದ್ಧ ಹಕ್ಕು" ಎಂದು ದಿಟ್ಟತನದಿಂದ ಹೇಳಿದ ಸ್ವತಂತ್ರ ಹೋರಾಟಗಾರರು ಯಾರು?
2. ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷರು ಯಾರಾಗಿದ್ದರು?
3. ನಮ್ಮ ಭಾರತವು ಯಾವ ಮಾದರಿಯ ಸರ್ಕಾರವನ್ನು ಹೊಂದಿದೆ?
4. ಭಾರತದ ಸ್ವಾತಂತ್ರ್ಯಕ್ಕಾಗಿ ಪ್ರಾಣಾರ್ಪಣೆ ಮಾಡಿದ ಮೂವರು ಪ್ರಸಿದ್ಧ ಸಹೋದರರು ಯಾರು?
5. ಭಾರತದ ಉಕ್ಕಿನ ಮನುಷ್ಯ ಎಂದು ಯಾರನ್ನು ಕರೆಯುತ್ತಿದ್ದರು?

## ಜ್ಞಾನ ವಿಜ್ಞಾನ

1. ನಮ್ಮ ದೇಶದಲ್ಲಿ ಅತಿಹೆಚ್ಚು ಏಲಕ್ಕಿ ಬೆಳೆಯುವ ರಾಜ್ಯ ಯಾವುದು?
2. ರಾಷ್ಟ್ರೀಯ ಯಕ್ಷಗಾನ ಕೇಂದ್ರ ಎಲ್ಲಿದೆ?
3. ಶಸ್ತ್ರ ಚಿಕಿತ್ಸೆಯ ಜನಕ ಎಂದು ಕರೆಯಲ್ಪಡುತ್ತಿದ್ದ ಪ್ರಾಚೀನ ಭಾರತೀಯ ವೈದ್ಯ ವಿಜ್ಞಾನಿಯ ಹೆಸರೇನು?
4. ವೈರ್‌ಲೆಸ್ ತಂತ್ರಜ್ಞಾನ ಆವಿಷ್ಕಾರ ಮಾಡಿದ ಭಾರತೀಯ ವಿಜ್ಞಾನಿ ಯಾರು?
5. ಔಷದ ವಿಜ್ಞಾನದ ಜನಕ ಚರಕನು ಜಗತ್ತಿಗೆ ಪರಿಚಯಿಸಿದ ಚಿಕಿತ್ಸಾ ಪದ್ಧತಿ ಯಾವುದು?

## ಜುಲೈ ಸಂಚಿಕೆಯ ಉತ್ತರಗಳು

**ಒಂದಿಷ್ಟು ಇತಿಹಾಸ - ಉತ್ತರಗಳು**

1. ಚಿಕ್ಕದೇವರಾಯ ಒಡೆಯರ್
2. ಒಂದನೇ ಪುಲಕೇಶಿ
3. ಕಲ್ಯಾಣಿ ಚಾಲುಕ್ಯರು
4. ಕೋಲಾರ
5. ಬಸವಣ್ಣ

**ಜ್ಞಾನ-ವಿಜ್ಞಾನ - ಉತ್ತರಗಳು**

1. ಕೊಡಗು
2. ಕಂಬಳ
3. ಹಾಸನ
4. ನೃಪತುಂಗ
5. ಮೈಸೂರು

# ರಾಜ್ಯದ ವಿವಿಧೆಡೆಗಳಲ್ಲಿ ನಡೆದ ಗುರುವಂದನಾ ಕಾರ್ಯಕ್ರಮ























ಶಹಾಪುರಕ್ಕೆ ಆಗಮಿಸಿದ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು
ಹಾಗೂ ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವರಾದ
ಸನ್ಮಾನ್ಯ ಶ್ರೀ ಬಿ. ಸಿ. ನಾಗೇಶ್ ಅವರಿಗೆ
ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ
ಯಾದಗಿರಿ ಜಿಲ್ಲಾ ಘಟಕದ ವತಿಯಿಂದ ಸನ್ಮಾನಿಸಲಾಯಿತು
ಹಾಗೂ ಶಿಕ್ಷಕರ ವಿವಿಧ ಬೇಡಿಕೆಗಳ ಈಡೇರಿಕೆಗೆ
ಮನವಿ ಸಲ್ಲಿಸಲಾಯಿತು



ಕಲಬುರಗಿ ಜಿಲಾ ಪದಾದಿಕಾರಿಗಳೊಂದಿಗೆ ಬೈಠಕ್



ಬೆಳಗಾವಿಯಲ್ಲಿ ನಡೆದ ಸಂಘಟನಾತ್ಮಕ ಬೈಠಕ್

MAG(3)/NPP/23/2020-21 Registered No. RNI 45459/85
Posted at Bangalore PSO Bangalore -560 026
Date of Publishing : 17-08-2021 Date of Posting 20th or 21st of every month Posted at Periodical Rate

# ಶ್ರದ್ಧಾಂಜಲಿ



ಕರ್ನಾಟಕ ರಾಜ್ಯ ಮಾಧ್ಯಮಿಕ ಸಂಘದ ರಾಜ್ಯ ಕಾರ್ಯಾಲಯದ ಪ್ರಮುಖರಾಗಿದ್ದ 84 ವರ್ಷ ವಯಸ್ಸಿನ ಶ್ರೀ ಜಿ. ಎಸ್. ಕೃಷ್ಣಮೂರ್ತಿಯವರು ಶನಿವಾರ ದಿನಾಂಕ 21–8–2021 ರಂದು ಮಧ್ಯಾಹ್ನ 2 ಗಂಟೆಯಲ್ಲಿ ಇಹಲೋಕವನ್ನು ತ್ಯಜಿಸಿದರು. ಬ್ರಹ್ಮಚಾರಿಯಾಗಿದ್ದ ಅವರು ಕಳೆದ ನಾಲ್ಕು ದಶಕಗಳಿಂದ ಸಂಘದ ಕಾರ್ಯಾಲಯದಲ್ಲೇ ಕಛೇರಿಯ ಎಲ್ಲಾ ಕೆಲಸಗಳನ್ನು ನಿರ್ವಹಿಸುತ್ತಾ, ಶಿಕ್ಷಕ ಸಂಘದ ಎಲ್ಲಾ ಕಾರ್ಯಕರ್ತರಿಗೂ ಹಿರಿಯಣ್ಣನಂತೆ, ಸಮಸ್ಯೆಗಳನ್ನು ಹೊತ್ತು ಬರುತ್ತಿದ್ದ ಶಿಕ್ಷಕರ ಸಮಸ್ಯೆಗಳನ್ನು ಶಾಂತವಾಗಿ ಆಲಿಸಿ, ಸೂಕ್ತವಾದ ಮಾರ್ಗದರ್ಶನ ಮಾಡುತ್ತಿದ್ದರು.

1937 ರ ಆಗಸ್ಟ್‌ನಲ್ಲಿ ತಿರುಮಕೂಡಲು ನರಸೀಪುರದಲ್ಲಿ ಜನಿಸಿದ ಜಿ. ಎಸ್. ಕೆ. ತಮ್ಮ ಪ್ರಾರಂಭಿಕ ವಿದ್ಯಾಭ್ಯಾಸವನ್ನು ಸ್ವಗ್ರಾಮ ಹಾಗೂ ನರಸೀಪುರದಲ್ಲಿ ಮುಗಿಸಿ, ಮೈಸೂರಿನಲ್ಲಿ ಹಾರ್ಡ್ವಿಕ್ ಹೈಸ್ಕೂಲ್ ಮತ್ತು ತಮ್ಮ ಎಂಎಸ್ಸಿ ಶಿಕ್ಷಣವನ್ನು ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಮುಗಿಸಿ ಚಾಮರಾಜನಗರದ ಕಾಲೇಜಿನಲ್ಲಿ ಗಣಿತ ಅಧ್ಯಾಪಕರಾಗಿ ಕೆಲವು ಕಾಲ ಕೆಲಸ ಮಾಡಿ ನಂತರ ಬೆಂಗಳೂರಿನ ಎಚ್‌ಎಎಲ್ ಹೈಸ್ಕೂಲ್‌ನಲ್ಲಿ ವಿದ್ಯಾರ್ಥಿಪ್ರಿಯ ಗಣಿತ ಶಿಕ್ಷಕರಾಗಿ 30 ವರುಷ ಸೇವೆ ಸಲ್ಲಿಸಿ ನಿವೃತ್ತರಾದರು.

ಜೀವನ ಪೂರ್ತಿ ಕಾಯಕಯೋಗಿಯಂತೆ ಶಿಕ್ಷಕ ಸಂಘದ ಕೆಲಸ ಮಾಡುತ್ತಾ, ನಲವತ್ತು ವರ್ಷಗಳಿಗೂ ಹೆಚ್ಚು ಕಾಲ ಸಂಘದ ವಿವಿಧ ಜವಾಬ್ದಾರಿಯನ್ನು ನಗು ನಗುತ್ತಾ ನಿರ್ವಹಿಸಿ ಇದೀಗ ನಮ್ಮನ್ನು ಬಿಟ್ಟು ಅಗಲಿದ್ದಾರೆ. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಅವರ ಸೇವೆಯನ್ನು ಸ್ಮರಿಸುತ್ತಾ ಅವರ ಆತ್ಮಕ್ಕೆ ಸದ್ಗತಿ ನೀಡೆಂದು ಪರಮಾತ್ಮನಲ್ಲಿ ಪ್ರಾರ್ಥಿಸುತ್ತದೆ.

## ಜಿ.ಎಸ್. ಕೃಷ್ಣಮೂರ್ತಿಯವರೊಡನೆ ಒಡನಾಟ

ನಮ್ಮ ಸಂಘಟನೆಯಲ್ಲಿ ನಾಲ್ಕು ದಶಕಗಳಿಗಿಂತಲೂ ಹೆಚ್ಚು ಕಾಲ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಕರ್ಮಯೋಗಿ ಶ್ರೀಯುತ ಜಿ.ಎಸ್.ಕೃಷ್ಣಮೂರ್ತಿಯವರು ದಿನಾಂಕ 21.08.2021ರಂದು ಬೆಂಗಳೂರಿನ ಕೇಂದ್ರ ಕಾರ್ಯಾಲಯದಲ್ಲಿ ವಿಧಿವಶರಾದರು. ಶಿಕ್ಷಕ ಸಮಾಚಾರದ ಸಂಪಾದಕರಾಗಿಯು ಅನೇಕ ವರ್ಷಗಳವರೆಗೆ ಸೇವೆಯನ್ನು ಸಲ್ಲಿಸಿದ್ದಾರೆ. ಇಂದಿಗೂ ಅತ್ಯಮೂಲ್ಯ ಸಲಹೆಗಳನ್ನು ನೀಡುತ್ತಾ, ಶಿಕ್ಷಕ ಸಮಾಚಾರದ ಸಂಪಾದಕ ಮಂಡಳಿಯಲ್ಲಿ ಉತ್ತಮ ಮಾರ್ಗದರ್ಶಕರಾಗಿದ್ದರು. ದಶಕಗಳಿಂದ ಸಂಘಟನೆಗೆ ಸಮರ್ಪಿತ ಜೀವನ ನಡೆಸಿದ್ದ ಅವರ ಜೊತೆ ನಮ್ಮ–ನಿಮ್ಮೆಲ್ಲರ ಒಡನಾಟ ಇತ್ತು. ಜಿ.ಎಸ್.ಕೆ ಯೊಂದಿಗೆ ಕಾರ್ಯಕರ್ತರ ಒಡನಾಟವನ್ನು, ಮರೆಯಲಾಗದ ವಿಶೇಷ ಅನುಭವಗಳನ್ನು ಶಿಕ್ಷಕ ಸಮಾಚಾರದ ಸೆಪ್ಟೆಂಬರ್ ಸಂಚಿಕೆಯಲ್ಲಿ ಪ್ರಕಟಿಸಬೇಕೆಂಬುದು ಸಂಪಾದಕೀಯ ಮಂಡಳಿಯ ಇಚ್ಛೆ. ತಮ್ಮ ಅನುಭವಗಳನ್ನು 6–8 ಸಾಲುಗಳಲ್ಲಿ ಬರೆದು ನಮ್ಮ ಈಮೇಲ್ ವಿಳಾಸ akss1950@gmail.com ಅಥವಾ kssta55@gmail.com ಗೆ ದಿನಾಂಕ 10.09.2021ರ ಒಳಗಾಗಿ ಕಳುಹಿಸಿ.

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com